ಉಪನ್ಯಾಸ ಗ್ರಂಥಮಾಲೆ

೯೬

ಮಾನವ ಜೀವನ ಹಾಗೂ ಭೌಗೋಲಿಕ ಪರಿಸರ

ಡಿ. ಜಿ. ಕುಲಕರ್ಣಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮೇ, ೧೯೭೦

ಉಪನ್ಯಾಸ ಗ್ರಂಥಮಾಲೆ

೧. ಭವಭೂತಿ (ದ್ವಿತೀಯ ಆವೃತ್ತಿ) –ಕೆ. ಕೃಷ್ಣಮೂರ್ತಿ
೨. ಮನೋರೋಗಗಳು (ತೃ.ಆ.) –ಎನ್. ಆರ್. ಕುಲಕರ್ಣಿ
೩. ಪ್ರಥಮ ಪಂಚವಾರ್ಷಿಕ ಯೋಜನೆ
ಹಾಗೂ ಒಕ್ಕಲುತನ –ಎನ್. ಪಿ. ಪಾಟೀಲ
೪. ಗಾದೆಗಳು (ದ್ವಿ. ಆ.) –ಎ. ಕೆ. ರಾಮಾನುಜನ್
೫. ಭಾರತದಲ್ಲಿ ಜಾತಿ ಪದ್ಧತಿ (ದ್ವಿ.ಆ.)–ವ್ಹಿ. ಎಸ್. ಡಿ'ಸೋಜಾ
೬. ಕೀಟಕ ಪಿಡುಗುಗಳ ಸಮೀಕ್ಷಣೆ (ದ್ವಿ.ಆ.)
–ಎಸ್. ಎಸ್. ಕಟಗಿಹಳ್ಳಿಮಠ
೭. ರಾಜಕೀಯ ಪಕ್ಷಗಳು(ದ್ವಿ.ಆ.)-ಎನ್.ರಾಜಗೋಪಾಲರಾವ್
೮. ಸ್ವಾದಿ ಅರಸುಮನೆತನ (,,)–ಎಸ್. ಎಸ್. ಮಾಳವಾಡ
೯. ಮಕ್ಕಳ ಶಿಕ್ಷಣ (ತೃ.ಆ.) –ಡಿ. ಎಸ್. ಕರ್ಕಿ
೧೦. ಮೂಢ ನಂಬಿಕೆಗಳು (,,) –ಎಲ್. ಆರ್. ಹೆಗಡೆ
೧೧. ಸಂಸ್ಕೃತ ಕವಯಿತ್ರಿಯರು (ದ್ವಿ. ಆ.)–ಕೆ. ಟಿ. ಪಾಂಡುರಂಗಿ
೧೨. ನಿತ್ಯಜೀವನದಲ್ಲಿ ರಸಾಯನಶಾಸ್ತ್ರ (,,) –ಬಿ. ವಿರೂಪಾಕ್ಷಪ್ಪ
೧೩. ಸಾರ್ವಜನಿಕ ಆಡಳಿತ (ದ್ವಿ. ಆ.) –ಜಿ. ಎಸ್. ಹಾಲಪ್ಪ
೧೪. ವಿಚಾರವಾದ (,,) –ಗೌರೀಶ ಕೈಕಿಣಿ
೧೫. ಮಹಾಕವಿ ಮಿಲ್ಟನ್ (,,) –ಜಿ. ಎಸ್. ಆಮೂರ
೧೬. ಭಾರತದಲ್ಲಿ ಗ್ರಂಥಾಲಯ ಪ್ರಸಾರ(,,)–ಕೆ ಎಸ್. ದೇಶಪಾಂಡೆ
೧೭. ಭಾರತೀಯ ನಾಗರಿಕತೆಗೆ ಮನುವಿನ
ಕೊಡುಗೆ (ದ್ವಿ. ಆ.) –ಬಿ. ಎಚ್. ಶ್ರೀಧರ
೧೮. ಜನಸಂಖ್ಯೆ ಹಾಗು ಆಹಾರ ಸಮಸ್ಯೆ
–ಪಿ. ಎಂ. ಉಮಾಕಾಂತಶಾಸ್ತ್ರಿ
೧೯. ಸೌರವ್ಯೂಹ (ದ್ವಿ.ಆ.) –ಸಿ. ಎನ್. ಶ್ರೀನಿವಾಸ ಅಯ್ಯಂಗಾರ
೨೦. ಪ್ರಾಚೀನ ಭಾರತದಲ್ಲಿ ಸಾಮಾಜಿಕ
ಜನಜೀವನ (ದ್ವಿ. ಆ.) –ಸಿ. ವ್ಹಿ. ರಂಗಸ್ವಾಮಿ
೨೧. ಸಮಾಜ ಕಾರ್ಯ(ದ್ವಿ.ಆ.)–ಎಚ್. ಎಂ. ಮರುಳಸಿದ್ಧಯ್ಯ
೨೨. ಸಂಸತ್ತಿನ ಕಾರ್ಯಪದ್ಧತಿ (,,)–ಎ. ಎಂ. ರಾಜಶೇಖರಯ್ಯ
೨೩. ಕನ್ನಡನಾಡಿನ ಶಾಸನಗಳು (ದ್ವಿ. ಆ.) –ಪಿ. ಬಿ. ದೇಸಾಯಿ
೨೪. ಕವೀಂದ್ರ ರವೀಂದ್ರರು (,,) –ಎಸ್. ಎಸ್. ಮಾಳವಾಡ
೨೫. ನಾಗಾನಂದ (,,) –ಎಚ್.ಪಿ. ಮಲ್ಲೇದೇವರ
೨೬. ಜೀವನದಲ್ಲಿ ನಗೆ (,,)–ಎಂ. ಎಸ್. ಸುಂಕಾಪುರ
೨೭. ಬಸವಣ್ಣನವರ ಯೋಜನೆಗಳು (,,) –ಬಿ. ಸಿ. ಜವ
೨೮. ೧೮೫೭ರ ಕ್ರಾಂತಿ (,,) –ಸಿ. ವೀರಬಸಣ್ಣ
೨೯. ಕನ್ನಡ ಕಥಾಸೃಷ್ಟಿ (ದ್ವಿ. ಆ.) –ಬಿ. ಬಿ. ಮಹೀಶವಾ
೩೦. ಸಂಸ್ಕೃತ ಸಾಹಿತ್ಯದಲ್ಲಿ ಶೃಂಗಾರರಸ (ದ್ವಿ. ಆ.)
–ಕೆ. ಕೃಷ್ಣಮೂರ್ತಿ
೩೧. ನೀರಾವರಿ ಬೇಸಾಯ –ಎಸ್. ಎ. ಹೊಸಮ
೩೨. ಸಾರ್ವಜನಿಕ ಅಭಿಪ್ರಾಯ(ದ್ವಿಆ)–ಎನ್.ರಾಜಗೋಪಾಲರಾವ್
೩೩. ಕನ್ನಡ ಕಾವ್ಯಗಳಲ್ಲಿ ಕಿರಾತಾರ್ಜುನ ಪ್ರಸಂಗ
–ದೇವೇಂದ್ರಕುಮಾರ ಪಕ

ಉಪನ್ಯಾಸ ಗ್ರಂಥಮಾಲೆ

೯೬

ಚಂದ್ರಶೇಖರ

ಮಾನವ ಜೀವನ ಹಾಗೂ ಭೌಗೋಲಿಕ ಪರಿಸರ

ಡಿ. ಜಿ. ಕುಲಕರ್ಣಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮೇ, ೧೯೭೦

ಪ್ರಕಾಶಕರು :

ಎಸ್. ಎಸ್. ಒಡೆಯರ, ಎಂ. ಎ., ಎಲ್ಎಲ್.ಬಿ.
ರಜಿಸ್ಟ್ರಾರ್,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ಮೇ, ೧೯೬೦ (೫೦೦೦ ಪ್ರತಿಗಳು)

ಬೆಲೆ : ೨೫ ಪೈಸೆ

ಮುದ್ರಕರು :
ಸಂಗಮ ಮುದ್ರಣಾಲಯ,
ಸಾಧನಕೇರಿ, ಧಾರವಾಡ

ಮುನ್ನುಡಿ

ನಮ್ಮ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ವಿಭಾಗವು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿ ತಿಂಗಳು ಏರ್ಪಡಿಸುತ್ತಿರುವ ಉಪನ್ಯಾಸ ಶಿಬಿರಗಳು ದಿನೇ ದಿನೇ ಜನಪ್ರಿಯವಾಗುತ್ತ ಸಾಗಿರುವುದು ನಿಜವಾಗಿಯೂ ಸಂತೋಷದ ಸಂಗತಿ. ಈ ಜ್ಞಾನಪ್ರಸಾರದ ಕಾರ್ಯದಲ್ಲಿ ಭಾಗವಹಿಸುವುದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕವೊದಗುವುದಲ್ಲದೆ ಎಂಥ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭವಾದ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ತೊಂಭತ್ತೈದು ಪುಸ್ತಕಗಳು ಪ್ರಕಟವಾಗಿವೆ. ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ಮೂರು ನಾಲ್ಕು ಮುದ್ರಣಗಳನ್ನೂ ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಧನಸಹಾಯ ಆಯೋಗದವರು ಉಪನ್ಯಾಸ ಶಿಬಿರಗಳಿಗೂ, ಈ ಪುಸ್ತಿಕೆಗಳ ಪ್ರಕಟನೆಗೂ ನೆರವು ನೀಡುತ್ತಿದ್ದು ಅವರಿಗೆ ವಿಶ್ವವಿದ್ಯಾಲಯವು ತನ್ನ ಕೃತಜ್ಞತೆಗಳನ್ನು ಸೂಚಿಸುತ್ತದೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖವಾದ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಎ. ಎಸ್. ಅಡಕೆ

ಧಾರವಾಡ ಕುಲಪತಿ

೧೪-೫-೧೯೭೦ ಕರ್ನಾಟಕ ವಿಶ್ವವಿದ್ಯಾಲಯ

ಅರಿಕೆ

ಈ ಕಿರುಹೊತ್ತಗೆಯು ಕರ್ನಾಟಕ ವಿಶ್ವವಿದ್ಯಾಲಯದ "ವ್ಯಾಸಂಗ ವಿಸ್ತರಣೋಪನ್ಯಾಸಮಾಲೆ"ಯ ಅಂಗವಾಗಿ ೯-೧೨-೧೯೭೯ ರಂದು ವಿಜಾಪುರ ಜಿಲ್ಲೆಯ ಬಾದಾಮಿ ತಾಲೂಕಿನ ಕೆರೂರ ಗ್ರಾಮದಲ್ಲಿ ನಾನಿತ್ತ ಉಪನ್ಯಾಸದ ವಿಸ್ತೃತ ರೂಪವಾಗಿದೆ.

"ಮಾನವ ಜೀವನ ಹಾಗೂ ಭೌಗೋಲಿಕ ಪರಿಸರ" ಇವುಗಳ ವಿವೇಚನೆಯನ್ನು ಸಾಧ್ಯವಿದ್ದಷ್ಟು ತಾತ್ವಿಕವಾಗಿ ಚರ್ಚಿಸಲು ಯತ್ನಿಸಿದ್ದೇನೆ. ಈ ಮಾಲಿಕೆಯಲ್ಲಿ ಪ್ರಕಟವಾದ ಪುಸ್ತಿಕೆಗಳಲ್ಲಿ ಭೂಗೋಲಶಾಸ್ತ್ರವನ್ನು ಕುರಿತುದು ಇದೇ ಮೊದಲನೆಯ ಕೃತಿಯಾಗಿದೆ ಎಂದು ತಿಳಿಸಲು ಸಂತೋಷ ವಾಗುತ್ತದೆ.

ಈ ಕೃತಿ ಬೆಳಕಿಗೆ ಬರಲು ಅವಕಾಶವನ್ನೊದಗಿಸಿದ ಕರ್ನಾಟಕ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ನಾನು ಮೊದಲು ತುಂಬಾ ಉಪಕೃತನಾಗಿದ್ದೇನೆ. ಈ ಪುಸ್ತಿಕೆಯ ಹಸ್ತಪ್ರತಿ ಯನ್ನು ತಯಾರಿಸುವಾಗ ಯೋಗ್ಯ ಸಲಹೆ ಸೂಚನೆಗಳನ್ನು ನೀಡಿ ನನಗೆ ಪ್ರೋತ್ಸಾಹಿಸಿದ ಡಾ.ಚಿ.ಎನ್.ಸಿನ್ಹಾ, ಭೂಗೋಲ ಶಾಸ್ತ್ರಾಧ್ಯಯನದ ಮುಖ್ಯಸ್ಥರು, ಇವರಿಗೆ ಮತ್ತು ಪ್ರಕಟನಾ

ಶಾಖೆಯ ನಿರ್ದೇಶಕರಾದ ಶ್ರೀ ಚೆನ್ನವೀರ ಕಣವಿ ಮತ್ತು ಶಿಬಿರ ದಲ್ಲಿ ಉಪನ್ಯಾಸದ ಸಂದರ್ಭದಲ್ಲಿ ಪ್ರೀತಿ ಆದರಗಳಿಂದ ಸಹ ಕರಿಸಿದ ಸಹಾಯಕ ನಿರ್ದೇಶಕರಾದ ಎಲ್. ಎಮ್. ಗುಡ್ಡೀನ ರವರಿಗೂ ನಾನು ಉಪಕೃತನಾಗಿದ್ದೇನೆ.

ಭೂಗೋಲಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ **ಡಿ. ಜಿ. ಕುಲಕರ್ಣಿ**
ಧಾರವಾಡ
೭–೫–೧೯೭೦

ವಿಷಯ ಸೂಚಿಕೆ

ಮಾನವ ಜೀವನ ಹಾಗೂ ಭೌಗೋಲಿಕ ಪರಿಸರ

೧. ವಿಷಯ ಪರಿಚಯ

ಮಾನವ ಒಂದು ಪ್ರದೇಶದಲ್ಲಿ ಪ್ರಥಮವಾಗಿ ಕಾಲಿಟ್ಟಿದ್ದಾನೆ ಎಂದು ಕಲ್ಪಿಸಿಕೊಂಡರೆ, ಒಬ್ಬ ಮಾಲಿಕನು ತನ್ನ ಆಸ್ತಿಯನ್ನು ತನ್ನ ತಾಬೆಯಲ್ಲಿ ತೆಗೆದುಕೊಳ್ಳುವಂತೆ- ಯಾವ ರೀತಿಯಾಗಿ ಇದ್ದುದನ್ನು ಉಪಯೋಗಿಸಿಕೊಳ್ಳಬಹುದೆಂದು ವಿಚಾರಿಸುತ್ತ -ಸೃಷ್ಟಿ ಸಂಪತ್ತೆಲ್ಲ ತನ್ನ ಸುಖಸೌಕರ್ಯಗಳಿಗಾಗಿ ಎಂದು ತಿಳಿದು ವರ್ತಿಸುವನು.

ನಾವು ಒಂದು ಭೌಗೋಲಿಕ ಪರಿಸರಕ್ಕೆ ಹೊಂದಿಕೊಂಡು ಆದರ ಹವಾಮಾನ, ಜೀವನದೊಡನೆ ಸಮರಸವಾಗಿರುವದರಿಂದ, ನಮಗೆ ಅಲ್ಲಿಯ ಭೌಗೋಲಿಕ ನಿಯಂತ್ರಕ ಪ್ರಭಾವಗಳು ಲಕ್ಷ್ಯಕ್ಕೆ ಬರುವದಿಲ್ಲ. ಇದು ಎಷ್ಟರಮಟ್ಟಿಗೆ ಪರಿಣಾಮ ಮಾಡಿರುತ್ತದೆಯೆಂದರೆ, ಪರಿಸರದ ಪ್ರಭಾವಗಳ ಬಗ್ಗೆ ವಿಚಾರವನ್ನೂ ಕೂಡ ಮಾಡುವದಿಲ್ಲ. ಆದರೆ ಒಂದು ಹೊಸ ಪರಿಸರದ ಪ್ರಭಾವಕ್ಕೊಳಗಾದ ಆದರ ಮಹತ್ವ ಎದ್ದು ಕಾಣುತ್ತದೆ.

ಭೌಗೋಲಿಕ ಪ್ರಭಾವಗಳನ್ನು ನಾಲ್ಕು ರೀತಿಯಾಗಿ ವಿಂಗ ಡಿಸಬಹುದಾಗಿದೆ. ನೇರವಾದ ದೈಹಿಕ ಪರಿಣಾಮಗಳು, ಮನ ಸ್ಸಿಗೆ ಸಂಬಂಧಿಸಿದವು; ಸಾಮಾಜಿಕ ಮತ್ತು ಆರ್ಥಿಕ ಜೀವನದ ಮೇಲಿನ ಪ್ರಭಾವಗಳು. ಇವುಗಳಲ್ಲಿ ಅರ್ಥವ್ಯವಸ್ಥೆಯ ಮೇಲಿನ ಪ್ರಭಾವಗಳು ಈ ವಿಷಯಕ್ಕೆ ನೇರವಾದ ಸಂಬಂಧ ಹೊಂದಿವೆ.

ಆರ್ಥಿಕ ಜೀವನದ ಪ್ರಭಾವಗಳು ಸಂಪತ್ತಿನ ವಿಪುಲತೆ, ಕೊರತೆ ಅಥವಾ ಸಾಮಾನ್ಯ ಅಲಭ್ಯವಾಗಿರುವದರ ಮೇಲೆ ಅವಲಂಬಿಸಿರುವವು. ಇವುಗಳ ಪ್ರಭಾವದಿಂದ ಸ್ವಸ್ಥಾನ ಬದ ಲಾವಣೆಯಿಂದಾಗಿ ಮಾನವರ ಪುನರ್‌ವಿತರಣೆ ನಡೆದಿರುವ ದಾಖಲೆಗಳಿವೆ.

"ಮಾನವನ ಇಚ್ಛೆ ಏನೂ ನಡೆಯುವದಿಲ್ಲ. ಎಲ್ಲವೂ ಪೂರ್ವ ಯೋಜಿತವಿರುತ್ತದೆ. ಅದರಲ್ಲಿಯೂ ನೆಲದ ಗುಣ ಸ್ವಸ್ಥಾನದಲ್ಲಿಯೇ ಇದ್ದುಕೊಂಡು, ಮಾನವರ ಬದಲಾಗುತ್ತಿ ರುವ ಆಶೆ ಆಕಾಂಕ್ಷೆಗಳಿಗೆ ಸಹಕರಿಸುತ್ತದೆ. ಇದು ಮನುಷ್ಯನ ಭಾಗ್ಯವನ್ನು ಬರೆಯುತ್ತದೆ. ದೈವದತ್ತವಾದ ಮಣ್ಣಿನ ಮಕ್ಕ ಳಾಗಿಯೇ ಬದುಕಬೇಕು, ಬೆಳೆಯಬೇಕು. ಕೊನೆಗೆ ಒಂದಾ ಬೇಕು"– ಇಂಥ ವಿಚಾರವಾದಕ್ಕೆ "ನಿಸರ್ಗ ನಿರ್ಣಯವಾದ ಎಂಬ ಹೆಸರು ಬಳಕೆಯಲ್ಲಿ ಬಂದಿದೆ.

ಸಾಧ್ಯತಾವಾದ (ಪರಿಸರಕ್ಕೆ ಮಾನವ ಹೊಂದಿಕೊಂಡಿರು ವದು) ವನ್ನು ಇತ್ತೀಚೆಗೆ ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿದೆ. ಒಂದು ಪ್ರದೇಶ ಒದಗಿಸುವ ಅನೇಕ ಅವಕಾಶಗಳಲ್ಲಿ ತನ

ಸಾಧ್ಯವಾದುದನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು ಮಾನವ ಹೊಂದಿರುವನು ಎಂಬುದು ಈ ವಾದದ ಮುಖ್ಯ ಜೀವಾಳ.

ಮನುಷ್ಯನು, ಮೂಲಭೂತ ಅವಶ್ಯಕತೆಗಳಾದ ಆಹಾರ, ವಸ್ತ್ರ ಮತ್ತು ವಸತಿ ಇವುಗಳನ್ನು ಯಾವದೇ ಪ್ರಕಾರದ ಪರಿಸರಕ್ಕೆ ಹೊಂದಿಕೊಳ್ಳುವುದರಿಂದಾಗಿ ದೊರಕಿಸಬಲ್ಲನೆಂಬುದನ್ನು ತೋರಿಸಿಕೊಟ್ಟಿದ್ದಾನೆ.

ಮಾನವ ಒಂದು ಪ್ರಾಣಿಯು ಮೇಲಿನ ನೊಣದಂತೆ, ಪೃಥ್ವಿಯ ಮೇಲೆ ಜೀವಿಸುತ್ತಾನೆ. ನೊಣಕ್ಕೆ ಇನ್ನೊಂದು ಪ್ರಾಣಿಗೆ ಬದಲಾಯಿಸಲು ಸ್ವಾತಂತ್ರ್ಯವಿದ್ದಂತೆ ಮನುಷ್ಯನೂ ಕೂಡ ಒಂದು ಪರಿಸರದಿಂದ ಇನ್ನೊಂದು ಪರಿಸರಕ್ಕೆ ಹೋಗಬಲ್ಲವನಾಗಿದ್ದಾನೆ. ಒಂದು ಅರ್ಥದಲ್ಲಿ ಮಾನವ ಪೃಥ್ವಿಯ ಪೃಷ್ಠಕ್ಕೆ ಅಂಟಿಕೊಂಡು ಬೆಳೆಯುವ ಪರಪೋಷಿತ ಜೀವಿ ಎಂದು ಹೇಳಬಹುದು.

ಮನುಷ್ಯ ನಿಸರ್ಗದ ಶಕ್ತಿಗಳಿಗೆ ಒಳಪಟ್ಟಿದ್ದಾನೆ. ದೀರ್ಘ ಕಾಲದ ಪ್ರಯತ್ನದಿಂದ ಈ ಶಕ್ತಿಗಳನ್ನು ನಿಯಂತ್ರಿಸಲು ಇಲ್ಲವೆ ಬದಲಿಸಲು ಅಖಂಡ ಪ್ರಯತ್ನ ನಡೆಸಿದ್ದರೂ, ಈ ವರೆಗೆ ಅವುಗಳಿಗೆ ಹೊಂದಿಕೊಂಡು ಬದುಕುವುದನ್ನು ಮಾತ್ರ ಕಲಿತಿದ್ದಾನೆ. ಉದಾ : ಬಿರುಗಾಳಿ ಮತ್ತು ಚಂಡಮಾರುತಗಳು ಕೆಲ ಕಾಲದಲ್ಲಿ ಹಾಳುಗೆಡವಿದ್ದನ್ನು ಸರಿಪಡಿಸಲು ಮಾನವನಿಗೆ ತಿಂಗಳಗಟ್ಟಲೆ ಹಿಡಿಯಬಹುದು. ಹಾಗೆಯೇ ನೀರಿನ ಬರ ಬಿದ್ದಾಗ ಕುಡಿಯುವ ನೀರಿಗೆ ಕೂಡ ಗತಿಯಿಲ್ಲದೇ ತೊಂದರೆಪಡಬೇಕಾಗಬ

ಬಹುದು. ಇಂಥ ಸಂದರ್ಭಗಳಲ್ಲಿಯು ಮನುಷ್ಯನ ಅಸಹಾಯಕತೆ
ಯನ್ನು ಒಪ್ಪಿಕೊಳ್ಳಲೇಬೇಕಾಗುವದು. ಇವೆಲ್ಲ ಪಾಪ ಹೆಚ್ಚಾ
ದಾಗ ದೇವರು ತನ್ನ ನೆನಪು ಕೊಡಲು ಉಂಟು ಮಾಡುವ
ಗಂಭೀರ ಸಂಕಟಗಳೆಂದು ಕೆಲವರ ನಂಬಿಕೆ. ಇವುಗಳನ್ನು ತಪ್ಪಿ
ಸುವುದು ಸಹಸಾ ಸಾಧ್ಯವಿಲ್ಲ. ಆದರೆ ತನ್ನ ಶಕ್ತಿಗೆ ಒಳಪಟ್ಟು
ಕೆಲವು ಬದಲಾವಣೆ ಮಾಡಿಕೊಳ್ಳಬಹುದು.

ಉದಾ : ೧) ಅನಿಶ್ಚಿತ ಮತ್ತು ಕಡಿಮೆ ಮಳೆಯಾಗುತ್ತಿ
ದ್ದರೆ ಅಲ್ಲಿ ನೀರಾವರಿ ಸೌಕರ್ಯ ಒದಗಿಸುವದು.

೨) ಉಷ್ಣತೆ ಬಹಳೆನಿಸಿದಲ್ಲಿ 'ಎಅರ ಕಂಡಿಶನಿಂಗ' ಮಾಡಿ
ತಂಪಾದ ಹವೆ ನಿರ್ಮಿಸಬಹುದು.

೩) ತೀರ ಚಳಿ ಇದ್ದಲ್ಲಿ ಒಲೆ ಹೊತ್ತಿಸಿ, ಅಥವಾ ಉಣ್ಣೆ
ಬಟ್ಟೆ ಉಪಯೋಗಿಸಿ ಚಳಿಯಿಂದ ರಕ್ಷಣೆ ಹೊಂದಬಹುದು.

೨. ನಿಸರ್ಗದಲ್ಲಿಯ ಶಕ್ತಿಗಳ ಪರಸ್ಪರ ಅವಲಂಬನೆ

೧) ಭೂ ಸ್ವರೂಪಗಳು ಮತ್ತು ಹವಾಮಾನ: ಎತ್ತರದ ಪ್ರದೇಶಗಳಲ್ಲಿ ಉಷ್ಣತೆ ಕಡಿಮೆ, ಮಳೆ ಒಂದು ಬದಿಗೆ ಮಾತ್ರ ಹೆಚ್ಚಾಗುವದು. ಭೂಭಾಗ ಮತ್ತು ಜಲಭಾಗಗಳು ಬೇರೆ ಬೇರೆ ರೀತಿಯಲ್ಲಿ ಕಾಯುವದು ಆರುವದು.

೨) ಭೂ ಸ್ವರೂಪಗಳು ಮತ್ತು ನೀರು– ಹವಾಮಾನದಲ್ಲಿ ಬದಲಾವಣೆಯಾದುದರಿಂದ ನೀರಿನ ವಿತರಣೆಯ ವ್ಯವಸ್ಥೆ ಬದಲಾಗುತ್ತದೆ. ಎತ್ತರ ಪ್ರದೇಶಗಳಿಂದ ನೀರು ಹರಿದು ಬಂದು ತಗ್ಗು ಪ್ರದೇಶದಲ್ಲಿ ಸಂಗ್ರಹಗೊಳ್ಳುತ್ತದೆ. ನೀರಿನ ಸಂಗ್ರಹಗಳು ಸಾಗರ, ನದಿಗಳು ಮತ್ತು ಸರೋವರಗಳ ಸ್ಥಾನ, ಭೌಗೋಲಿಕ ಪರಿಸರದಲ್ಲಿ ಪ್ರಾಥಮಿಕ ಮಹತ್ವವನ್ನು ಪಡೆದಿವೆ.

೩) ಭೂ ಸ್ವರೂಪ ಮತ್ತು ಸಸ್ಯವರ್ಗ– ಭೂ ಸ್ವರೂಪಗಳು ಹವಾಮಾನದ ಮೇಲೆ ಪ್ರಭಾವ ಬೀರುವದರಿಂದ, ಸಸ್ಯವರ್ಗದಲ್ಲಿಯ ಭಿನ್ನತೆಗೆ ಕಾರಣವಾಗುತ್ತವೆ.

೪) ಭೂ ಸ್ವರೂಪಗಳು ಮತ್ತು ಖನಿಜಗಳು- ಭೂ ಸ್ವರೂಪಗಳು ನಿರ್ಮಾಣಗೊಳ್ಳುವ ಕಾರ್ಯದಲ್ಲಿ ಕೆಲವು ಖನಿಜಗಳು ಅಭಿವೃದ್ಧಿಗೊಳ್ಳುವವು.

೫) ಭೂ ಸ್ವರೂಪಗಳು ಮತ್ತು ಮಣ್ಣಿನ ಪ್ರಕಾರಗಳು- ಭೂಮಿಯ ಇಳಿಜಾರು, ಮಣ್ಣುಗಳು ತಯಾರಾಗುವ ಕಾರ್ಯದಲ್ಲಿ ಒಂದು ನಿರ್ಧಾರಕ ಘಟಕವಾಗಿದೆ. ಪರ್ವತದ ಪಾರ್ಶ್ವದಲ್ಲಿಯ ಮಣ್ಣಿಗೂ ಕಣಿವೆಯಲ್ಲಿಯ ಮಣ್ಣಿಗೂ ಬಹಳ ಅಂತರವಿದೆ.

೬) ಹವಾಮಾನ ಮತ್ತು ಭೂ ಸ್ವರೂಪಗಳು-- ಉಷ್ಣತಾ ವ್ಯತ್ಯಾಸದಿಂದ ಶಿಲಾ ಶಿಥಿಲೀಕರಣದ ವೇಗವನ್ನು ಹೆಚ್ಚು ಕಡಿಮೆ ಮಾಡುವವು-ಆರ್ದ್ರ ಮತ್ತು ಶುಷ್ಕ ಹವಾಮಾನದ ಪ್ರದೇಶದಲ್ಲಿ ಭಿನ್ನ ಭೂ ಸ್ವರೂಪಗಳು ಸಾಕಾರಗೊಳ್ಳುತ್ತವೆ.

೭) ಹವಾಮಾನ ಮತ್ತು ಸಸ್ಯವರ್ಗ- ಹವಾಮಾನ ಮತ್ತು ಸಸ್ಯ ವರ್ಗಗಳ ನಡುವೆ ನಿಕಟ ಸಂಬಂಧವಿದೆ.

೮) ಹವಾಮಾನ- ಸಸ್ಯವರ್ಗ- ಮತ್ತು ಮಣ್ಣಿನ ಪ್ರಕಾರ- ಹೀಗೆ ಅನೇಕ ರೀತಿಯಾಗಿ ಪರಸ್ಪರ ಅವಲಂಬನೆಯನ್ನು ಕಾಣಬಹುದಾಗಿದೆ.

ಆದರೆ ಈ ಸಂಬಂಧಗಳು ಯಾವುದೇ ಭಾಗದಲ್ಲಿ ನೇರವಾಗಿ ಸರಳವಾಗಿರದೆ ಬಹಳ ಕ್ಲಿಷ್ಟವಾಗಿರುವವು.

ಸಸ್ಯ, ಪ್ರಾಣಿ ಮತ್ತು ಮಾನವ ಈ ಮೂವರಲ್ಲಿ- ಸಸ್ಯಗಳು ಪರಿಸರಕ್ಕೆ ಹೊಂದಿಕೊಳ್ಳಲೇಬೇಕು: ಇಲ್ಲವೆ ನಾಶವಾ

ಬೇಕು. ಪ್ರಾಣಿವರ್ಗಕ್ಕೆ ಹೊಂದಿಕೊಳ್ಳುವ ಶಕ್ತಿಯಿದೆ. ಫರ್ ಬೆಳೆಸುವದು, ನೆಣದ ಪದರು ಬೆಳೆಸಿಕೊಳ್ಳುವದು, ಚಳಿಯಿಂದ ಸಂರಕ್ಷಿಸಲು ಚಲನಶೀಲವಾಗಿ ಇರುವುದು ಮುಂ. ಹಕ್ಕಿಗಳು ಚಳಿ ಗಾಲ ಬಂದ ಕೂಡಲೆ ವಿಷವವೃತ್ತದ ಕಡೆಗೆ ಹಾರಿ ಬರುವವು.

ಮನುಷ್ಯನಿಗೆ ಮೇಲಿನ ಎರಡಲ್ಲದೆ ಇನ್ನೂ ಒಂದು ಶಕ್ತಿ ಇದೆ. ಹವಾಮಾನಕ್ಕೆ ಅವನು ಅದ್ಭುತವಾಗಿ ಹೊಂದಿಕೊಂಡದ್ದನ್ನು ಕಾಣಬಹುದು; ಹಲವು ರೋಗಗಳು ಬರದಂತೆ ಪ್ರತಿಬಂಧಿಸಿದ್ದಾನೆ; ಋತುಗಳ ಪ್ರಕಾರ ಸ್ಥಾನ ಬದಲಾವಣೆಯನ್ನು ಸಾಧಿಸಿದ್ದಾನೆ. ಮಳೆ– ಗಾಳಿ– ಚಳಿಯಿಂದ ರಕ್ಷಿಸಲು ಮನೆಕಟ್ಟಿಕೊಳ್ಳುವದನ್ನು ಕಲಿತ. ಇಲ್ಲಿ ಮಾನವನ ಮೂರನೇ ಶಕ್ತಿ–ಬುದ್ಧಿ, ಅಸಹಾಯ ಪರಿಸ್ಥಿತಿಯನ್ನು ಹೊಡೆದೋಡಿಸಲು " ಶೋಧಕ ಶಕ್ತಿ "ಗೆ ಕಾರಣವಾಗಿದೆ. ಇದಕ್ಕೂ ಮಿತಿಯೆಂಬುದಿಲ್ಲ. ಇದರ ಸಹಾಯದಿಂದ ಮಾನವನು ಜಗತ್ತಿನ ಪ್ರತಿಯೊಂದು ಪ್ರದೇಶವನ್ನು ತನ್ನ ಪ್ರದೇಶವನ್ನು ಮಾಡಿ, ಅಲ್ಲಿ ಯಶಸ್ವಿಯಾಗಿ ಬದುಕಲು ಕಲಿತುಕೊಂಡಿದ್ದಾನೆ. ಈ ಪ್ರದೇಶ ಅವನ ಸರ್ವ ಅವಶ್ಯಕತೆಗಳನ್ನು ಪೂರೈಸಲಿಕ್ಕಿಲ್ಲ. ಅಂಥವುಗಳನ್ನು ಹೊರಗಿನಿಂದ ತರಿಸಿಕೊಂಡು ಅಲ್ಲಿರಬಲ್ಲ.

ವಿವಿಧ ಭೂ ಸ್ವರೂಪಗಳು, ಹವಾಮಾನ, ಸಸ್ಯವರ್ಗ, ಮಣ್ಣಿನ ಪ್ರಕಾರ, ನೀರು ಖನಿಜಗಳು ಕೆಲವು ಸದವಕಾಶಗಳನ್ನು ಒದಗಿಸುತ್ತವೆ. ಮನುಷ್ಯನು ಅವುಗಳಲ್ಲಿ ಕೆಲವನ್ನು ಆರಿಸಿಕೊಂಡು ಅಭಿವೃದ್ಧಿ ಪಡಿಸಿದ್ದಾನೆ. ಒಂದಾದರೂ ನಿಸರ್ಗ ಸಂಪತ್ತಿರಬೇಕು, ಅದರ ಸದುಪಯೋಗವನ್ನು ಪಡೆಯಲು ಅಲ್ಲಿ

ನಿಲ್ಲುತ್ತಾನೆ. ಇನ್ನುಳಿದ ಆವಶ್ಯಕತೆಗಳನ್ನು ಬೇರೆ ಕಡೆಯಿಂದ ತರಿಸಿಕೊಳ್ಳುತ್ತಾನೆ.

ಕೆಲವು ಪ್ರದೇಶಗಳಲ್ಲಿ ಎಲ್ಲವೂ ಇರಬಹುದು. ಇಲ್ಲದಿರಬಹುದು. ಒಂದು ಇದ್ದರೆ ಇನ್ನೊಂದು ಅನುಕೂಲವಿರಲಿಕ್ಕಿಲ್ಲ. ಹೀಗೆ ಅನೇಕ ತರಹದ ಪ್ರದೇಶಗಳನ್ನು ಕಲ್ಪಿಸಬಹುದಾಗಿದೆ.

ಮನುಷ್ಯನ ತಾಂತ್ರಿಕ ಅಭಿವೃದ್ಧಿಯ ಮಟ್ಟದ ಮೇಲೆಯೂ ಖನಿಜಾಭಿವೃದ್ಧಿ; ಯಂತ್ರನಿರ್ಮಾಣ ಮತ್ತು ನಗರೀಕರಣ ಮುಂದುವರೆದ ಮತ್ತು ವಿಶಿಷ್ಟವಾದ ಆರ್ಥಿಕ ಚಟುವಟಿಕೆಗಳು ಅವಲಂಬಿಸಿವೆ. ವಿಶಿಷ್ಟ ಕಚ್ಚಾ ಸರಕುಗಳ ಶೋಧದಲ್ಲಿ ಅವನು ಸದಾ ತೊಡಗಿರುವನು. ನಿರ್ಣಯ :– ಮನುಷ್ಯನಿಗೆ ತನಗೆ ಬೇಕಾದುದನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯದಲ್ಲಿ ಪರಿಸರವು ತನ್ನ ನಿರ್ಬಂಧನೆ ಹೇರಲಾರದು.

ಪರಿಸರ ನಿರ್ಬಂಧ ತತ್ವ ತೀರ ಹಿಂದುಳಿದ ವಿಚಾರ ಧಾರೆ. ಮನುಷ್ಯನ ಜೀವನ ರೀತಿ – ತಾಂತ್ರಿಕ ಜ್ಞಾನದ ಉಪಯೋಗ ಹೆಚ್ಚಿಗಿದ್ದರೆ – ಅವನಿಗಿರುವ ಅವಕಾಶಗಳು ವಿಪುಲವಾಗುವವು. ಬೇಕಾದುದನ್ನು ಆರಿಸಿಕೊಳ್ಳುವನು. ಜಗತ್ತಿನ ಭಿನ್ನ ವಿಭಾಗಗಳು ಕೆಲವೊಂದು ಸಂಪತ್ತನ್ನು ಆವನ ಕೈಯಲ್ಲಿಡುತ್ತವೆ ಮತ್ತು ಕೆಲವು ತೊಂದರೆ ಸಂಕಷ್ಟ ಸಮಸ್ಯೆಗಳನ್ನು ಒಡ್ಡುತ್ತವೆ. ಯಾವದಾದರೊಂದನ್ನು ಆರಿಸಿಕೊಂಡು ಸಮಸ್ಯೆಗಳನ್ನು ಬಿಡಿಸಿಕೊಳ್ಳಬಹುದು. ಅಥವಾ ತನ್ನ ಪ್ರಗತಿಗೆ ಅಡ್ಡ ಬರದಂತೆ ಮಾಡಿಕೊಳ್ಳಬಹುದು.

ಈಗ ಪರಿಸರವು ಹೇಗೆ ಮಾನವ ಜೀವನವನ್ನು ಪ್ರಭಾವಿಸಬಹುದು ನೋಡೋಣ.

ಭೂಸ್ವರೂಪ– ಸಂಪರ್ಕ ಮಾರ್ಗವನ್ನು ನಿರ್ಮಿಸುವಲ್ಲಿ ಭೂಸ್ವರೂಪಗಳು ಸಮಸ್ಯೆ ಒಡ್ಡಿವೆ. ಪರ್ವತಗಳು ಜನಾಂಗಗಳನ್ನು ಬೇರ್ಪಡಿಸಿವೆ. ಸಮತಟ್ಟು ಪ್ರದೇಶಗಳು ಸಂಪರ್ಕಗಳನ್ನು ಹೆಚ್ಚಿಸುತ್ತವೆ. ಇವು ಚಲನೆಗೆ ಅನುಕೂಲವಾದ ಸರಳ ಸಂಪರ್ಕಗಳಾಗಿವೆ.

ಹವಾಮಾನ— ಹವಾಮಾನವನ್ನು ಅನುಸರಿಸಿ ಮನೆಗಳು ಮತ್ತು ಜನರ ವಸ್ತ್ರ ಪದ್ಧತಿ ಬದಲಾಗುವಾಗ, ಇವು ಉಷ್ಣತೆ ಮತ್ತು ಮಳೆ ಪ್ರಮಾಣವನ್ನು ಪ್ರತಿಬಿಂಬಿಸುತ್ತವೆ; ಒಕ್ಕಲುತನದ ಬೆಳೆಗಳನ್ನು ನಿರ್ಣಯಿಸುತ್ತವೆ.

ನೀರು— ಆರ್ದ್ರತೆ, ಹರಿಯುವ ನೀರು, ಅಂತರ್ಜಲ, ಮಾನವನಿಗೆ ಜೀವನದಾನ ಮಾಡತಕ್ಕವು. ಮೊದಲನೆಯದಾಗಿ ಒಂದು ಪ್ರದೇಶದಲ್ಲಿ ಜನವಸತಿ ಇರಬಲ್ಲದೋ ಹೇಗೆ ಎಂಬುದನ್ನು ನಿರ್ಧರಿಸುವದು, ಹರಿಯುವ ನೀರು ಮಾನವನಿಗೆ ನೀರಿನ ಪೂರೈಕೆ, ಶಕ್ತಿ ನಿರ್ಮಾಣ, ಸಂಚಾರ ಅನುಕೂಲತೆ ಒದಗಿಸುತ್ತದೆ. ಒಕ್ಕಲುತನ ಚಟುವಟಿಕೆಗೆ ಸಹಕಾರಿಯಾಗುತ್ತದೆ.

ಸಸ್ಯ— ಆಹಾರ, ಕಟ್ಟಡ ಕಟ್ಟಿಗೆ, ಉರುವಲುಗಳನ್ನು ಒದಗಿಸುತ್ತದೆ.

ಪ್ರಾಣಿ– ಹಿಂದುಳಿದ ಜನಾಂಗಗಳನ್ನು ಬಿಟ್ಟರೆ, ಮಾನವನಿಗೆ ಇವು ಮಹತ್ವದವಲ್ಲ. ಸಾಕು ಪ್ರಾಣಿಗಳನ್ನು ಶಕ್ತಿ ಮತ್ತು ಆಹಾರ ಉತ್ಪಾದನೆಯಲ್ಲಿ ಉಪಯೋಗಿಸಿಕೊಳ್ಳುವನು.

ಮಣ್ಣುಗಳು–ಹವಾಮಾನದ ಜೊತೆಗೆ, ಬೆಳೆ ತೆಗೆಯಲು ಅವಶ್ಯಕವಾದುದು.

ಖನಿಜಗಳು–ಔದ್ಯೋಗೀಕರಣ ಹೆಚ್ಚಿದಂತೆಲ್ಲ ಖನಿಜಗಳ ಮೇಲೆ ಅವಲಂಬನೆ ಹೆಚ್ಚಾಗುತ್ತದೆ. ಅವುಗಳ ಅಸಮ ವಿತ ರಣೆ ಆಧಾರದ ಮೇಲೆ ಮಾನವನ ವಿತರಣೆಯು ನಿರ್ಧರಿಸಲ್ಪ ಡುತ್ತದೆ.

ಮಾನವ ಸ್ವತಃ ಮಾರ್ಪಾಡುಗಳನ್ನು ಮಾಡುವ ಒಂದು ಶಕ್ತಿಯಾಗಿದ್ದಾನೆ ಇದೂ ಸತ್ಯ. ಕಾಲುವೆಗಳನ್ನು ತೋಡು ವದು, ನದಿ ಬದಿ ಗೋಡೆಗಳನ್ನು ಕಟ್ಟುವದು, ಸೋಪಾನ ಕೃಷಿ ಮಾಡುವದು ಇತ್ಯಾದಿ.

ಮಾರ್ಗ–ರೈಲು– ವಿಮಾನ ನಿಲ್ದಾಣ–ಸುರಂಗ– ಪಟ್ಟಣ ಗಳು ಇವೆಲ್ಲ ಅವನು ಮಾಡಿದ ಬದಲಾವಣೆಗಳಿಗೆ ಪ್ರತೀಕಗಳು. ಹವಾಮಾನದಲ್ಲಿ ಬದಲಾವಣೆ, ಅವನ ಅಳತೆಗೆ ಮೀರಿದ್ದು. ಕೃತ್ರಿಮ ಮಳೆ– ಮಂಜು ಬೀಳುವದನ್ನು ತಡೆಯುವದು– ಈ ಪ್ರಯತ್ನಗಳಲ್ಲಿ ಅವನು ಅಯಶಸ್ವಿಯಾಗಿದ್ದಾನೆ. ಮನೆಯ ಒಳಗೆ ಕಾಸುವದು, ಆರ್ದ್ರತೆ ಹೆಚ್ಚಿಸುವದು, ಒಣದಾಗಿರುವ ತೆಯೂ ಅಥವಾ ತಂಪಾಗಿಯೂ ಮಾಡಬಹುದಾಗಿದೆ.

ನದಿ ಮತ್ತು ಸರೋವರಗಳನ್ನು ನಿಯಂತ್ರಿಸುವಲ್ಲಿ ತನ್ನ ಶಕ್ತಿಯನ್ನು ಉಪಯೋಗಿಸಿರುವನು. ನೀರು ಸಮೃದ್ಧವಾಗಿ ದೊರೆಯುವಲ್ಲಿ ತಂದು, ಕೊರತೆಯ ಪ್ರದೇಶಕ್ಕೆ ತನ್ನ ಯೋಜ ನೆಯ ಪ್ರಕಾರ ವಿತರಣೆ ಮಾಡುವಲ್ಲಿ ಅತ್ಯಂತ ಯಶಸ್ವಿ ತಂತ್ರ ಗಳನ್ನು ಶೋಧಿಸಿದ್ದಾನೆ. ಸಸ್ಯಗಳನ್ನು ತನ್ನ ಬೇಕು ಬೇಡ ಗಳ ಪ್ರಕಾರ ನಿಯಂತ್ರಿಸುತ್ತಾನೆ. ನೂರರಲ್ಲಿ ಹತ್ತುಪಾಲು ಪ್ರದೇಶದಲ್ಲಿ ಮಾನವ ಆರಿಸಿಕೊಂಡು ಅಭಿವೃದ್ಧಿ ಪಡಿಸಿರು

ಬೆಳೆಗಳಿವೆ. ಮೊದಲಿನ ಸಸ್ಯಗಳನ್ನೆಲ್ಲ ನಾಶಗೊಳಿಸಿದ್ದಾನೆ. ಇನ್ನುಳಿದಲ್ಲಿ ಅಡವಿಗಳ ಉತ್ಪಾದನೆಗಳನ್ನು ಉಪಯೋಗಿಸು ತ್ತಾನೆ. ತಮಗೆ ಬೇಕಾದ ಜಾತಿಯ ಗಿಡಗಳಿಗೆ ಅವಕಾಶ ಕೊಡುತ್ತಾನೆ.

ಮನುಷ್ಯ ಸಾಮಾನ್ಯವಾಗಿ ಪ್ರಾಣಿ ಸಾಮ್ರಾಜ್ಯಕ್ಕೆ ಅಧಿಪ ತಿಯಾಗಿರುವನು. ಸುಮಾರು ೨೦ ಪ್ರಾಣಿಗಳು ಮನುಷ್ಯ ಪ್ರಯತ್ನದಿಂದ ಮಾರ್ಪಾಡಾಗಿವೆ. ಖನಿಜಗಳ ಶೋಧ ಮಾಡಿ ಅವುಗಳ ಯಜಮಾನನಾಗಿದ್ದಾನೆ. ಭೌಗೋಲಿಕ ಪರಿಸರ ಸಾವಕಾಶವಾಗಿ ಬದಲಾಗುತ್ತಿದೆ. ಪರಿಸರದ ಪ್ರಯೋಜನ ಪಡೆಯುವ ಅವನ ಶಕ್ತಿ ವೃದ್ಧಿಸುತ್ತಲಿದೆ. ಸಂಪರ್ಕವಿಲ್ಲದಾಗ ಸಾವಿರಾರು ಮೈಲುಗಳ ಅಂತರದಲ್ಲಿದ್ದವರು ಬೇರೆ ಇದ್ದು ಕೊಂಡು ತಮ್ಮ ತಂತ್ರವನ್ನು ಬೆಳೆಸಬೇಕಾಯಿತು. ತಮ್ಮಲ್ಲಿಯ ವಸ್ತುಗಳ ಮೇಲೆ ಮಾತ್ರ ಅವಲಂಬಿಸುವದು ಅನಿವಾರ್ಯವಾ ಯಿತು. ಈಗ ಸಂಚಾರ ಮತ್ತು ವಿಚಾರ ಪ್ರಚಾರ ಶೀಘ್ರವಾ ಗಿರುವದರಿಂದ, ಹೊಸ ವಿಚಾರಗಳು ಬೇಗ ಹಬ್ಬಿ ತನ್ನ ಸಮ ಸ್ಯೆಗಳನ್ನು ಬಿಡಿಸಲು ಹೆಚ್ಚು ಸಮರ್ಥನಾಗಿದ್ದಾನೆ. ವಿಚಾರಗ ಳನ್ನು ಸ್ವೀಕರಿಸಿ ಕೆಳಗಿನ ತತ್ವಗಳನ್ನು ಮಂಡಿಸಲಾಗಿದೆ:

೧) ವಿಚಾರ ಅರಿವುಗಳ ಆಮದು:

ಅಂತರ್ ಸಂಸ್ಥೆಗೆ ಸಂಬಂಧಗಳು ಮಾನವನ ತಾಂತ್ರಿಕ ಜ್ಞಾನ ಬೆಳೆಸಿ, ಪರಿಸರದ ಪ್ರಭಾವಿ ಪ್ರಯೋಜನ ಪಡೆಯುವಲ್ಲಿ ಸಹಕಾರಿಯಾಗುತ್ತದೆ. ಇದಕ್ಕೆಲ್ಲ ಸಂಪರ್ಕ ಸಾಧನೆಗಳು ಬೆಳೆ ಯಬೇಕು.

೨) ಪ್ರಗತಿ ಯತ್ನ ಮುನ್ನಡೆ:

ಪ್ರಗತಿಯ ಆವಶ್ಯಕತೆಯನ್ನು ಮನ್ನಿಸಿ, ಪ್ರತಿಯೊಬ್ಬನೂ ಅಧಿಕೋತ್ಪಾದನೆಯಲ್ಲಿ ತೊಡಗಿ ನಿಸರ್ಗ ಸಂಪತ್ತಿನ ಪರಮೋಪಯೋಗವಾಗಬೇಕು.

೩) ಹಿಂದುಳಿದ ಜನಾಂಗದ ಹಿನ್ನಡೆ:

ಬೇಟೆಯಾಡುವುದು, ಕೂಡಿ ಹಾಕುವದು– ಸಂಚಾರಿ ದನ ಕಾಯುವದು, ಅಶಾಶ್ವತ ಒಕ್ಕಲುತನ– ಇವುಗಳನ್ನು ಕ್ರಮೇಣ ತ್ಯಜಿಸಿ ಹೆಚ್ಚಿನ ಮಟ್ಟದ ಕಾರ್ಯಕ್ಕೆ ಹೋರಾಡುತ್ತಾನೆ. ಬೇಗ ಇವು ಇಲ್ಲದಾಗುವದು.

ಕೊನೆಯದಾಗಿ, ಈ ಬದಲಾವಣೆ ನಮ್ಮ ಸಂಪತ್ ಸಂಗ್ರಹಗಳನ್ನು ಬೇಗ ಮುಗಿಸುವ ಹೆದರಿಕೆ ಇದೆ. ಹೊಸ ಕಚ್ಚಾ ವಸ್ತುಗಳ ಶೋಧಗಳಾಗಬೇಕು. ಸಂಪತ್ತಿನ ಕೊರತೆಯಾಗದಂತೆ ಭಿನ್ನ ವಸ್ತುಗಳ ಉಪಯೋಗ ಮಾಡುತ್ತ ಹೋಗಬೇಕು.

೩. ಮಾನವನ ಅರ್ಥವ್ಯವಸ್ಥೆಯ ವಿವಿಧ ಹಂತಗಳು

ಸಸ್ಯ ಮತ್ತು ಪ್ರಾಣಿಗಳಿಗೆ ಇರಲಾರದಂಥ ಶಕ್ತಿಗಳನ್ನು ಮಾನವ ಪಡೆದಿರುವದರಿಂದಲೇ ದೇಹರಚನೆಯಲ್ಲಿ ಬದಲಾವಣೆ ಬಹಳವಾಗಿ ಕಂಡು ಬರುವದಿಲ್ಲ. ಪರಿಸರ ಅಸಾಧ್ಯವಾಗಿ ಅಸಹ್ಯವಾಗಿದ್ದ ಪಕ್ಷದಲ್ಲಿ ಅವನು ಗುಳೇ ಹೋಗುವದುಂಟು. ಆದರೂ ತನ್ನ ಬುದ್ಧಿ ಚಾಲನೆಯಿಂದ ಹವಾಮಾನದ ಕಠಿಣತೆಯನ್ನು ಮೀರಿ ನಿಲ್ಲುವ ದಿಕ್ಕಿನಲ್ಲಿ ಸಾಕಷ್ಟು ಮುಂದುವರಿದಿದ್ದಾನೆ. ಆದರೆ, ಸಸ್ಯಗಳು ಪರಿಸರಕ್ಕೆ ಹೊಂದಿಕೊಳ್ಳಬೇಕು, ಇಲ್ಲವೆ ನಾಶವಾಗಬೇಕು. ಅನ್ಯ ಮಾರ್ಗವೇ ಇರುವದಿಲ್ಲ. ಪ್ರಾಣಿಗಳು ಬಹಳಷ್ಟು ಮಟ್ಟಿಗೆ ಪರಿಸರಕ್ಕೆ ಹೊಂದಿಕೊಂಡಿರುವದನ್ನು ಕಾಣಬಹುದು. ಚಳಿಯಿಂದ ರಕ್ಷಿಸಿಕೊಳ್ಳಲು ಮೈತುಂಬ ಕೂದಲು ಧರಿಸುವದು, ಆಹಾರದ ರೂಢಿ ಬದಲಿಸುವದು ಇತ್ಯಾದಿ. (ಋತು ಬದಲಾವಣೆಯಾದಾಗ) ತುಸು ಬೆಚ್ಚಗಿನ ಪ್ರದೇಶಗಳಿಗೆ ಹಾರಿ ಬರುವದುಂಟು. ಚಳಿಗಾಲದ ನಂತರ

ಮತ್ತೆ ತಮ್ಮ ಸ್ಥಾನಕ್ಕೆ ತಿರುಗುವವು. ಇವೆಲ್ಲ ವಿಚಾರಗಳಿಂದ ಪರಿಸರದ ಪ್ರಭಾವಗಳ ತೀಕ್ಷ್ಣತೆ ಕಡಿಮೆ ಮಾಡಲು ಮಾನವನ ಬುದ್ಧಿ ಶಕ್ತಿ ಸಹಾಯಕವಾಗಿದೆ ಎನ್ನುವದನ್ನು ಕಂಡುಕೊಳ್ಳಬಹುದು. ಇದು ನಿಜವಿದ್ದರೂ, ಮಾನವನು ಬುದ್ಧಿಶಕ್ತಿಯಿಂದ ಸ್ವಲ್ಪ ಪ್ರಮಾಣದಲ್ಲಿ ಮಾತ್ರ ಪರಿಸರದಲ್ಲಿ ಹೊಂದಿಕೊಂಡು ಬದುಕನ್ನು ನಡೆಸುತ್ತಿದ್ದಾನೆ.

ಬದುಕುವದಕ್ಕಾಗಿ ಮಾನವರು ಆಹಾರವನ್ನು ದೊರಕಿಸಲೇಬೇಕು. ಈ ಮಾನವನ ಅರ್ಥ ವ್ಯವಸ್ಥೆಗಳು, ಆಹಾರ ಪದಾರ್ಥಗಳನ್ನು ಪ್ರಾಣಿ ವರ್ಗದಿಂದಾಗಲೀ ಸಸ್ಯ ಸಾಮ್ರಾಜ್ಯದಿಂದಾಗಲೀ ಪಡೆಯಬೇಕು. ಪ್ರಾರಂಭ ಹಂತದಲ್ಲಿ ಸುತ್ತಲೂ ಲಭ್ಯವಿರುವ ಪಶು ವರ್ಗದಿಂದ ಮತ್ತು ಸಸ್ಯಗಳಿಂದ ತನ್ನ ಆಹಾರವನ್ನು ಒದಗಿಸುವದೇ ಪ್ರಾಥಮಿಕ ಚಟುವಟಿಕೆಯಾಯಿತು. ಮುಂದಿನ ಹಂತದಲ್ಲಿ ಕೆಲವು ಉಪಯೋಗೀ ಪ್ರಾಣಿಗಳನ್ನು ಆರಿಸಿಕೊಳ್ಳುವದು, ಮತ್ತು ಅವುಗಳಿಂದ ಬರುವ ಉತ್ಪನ್ನವನ್ನು ಜೀವನ ನಿರ್ವಹಣೆಯಲ್ಲಿ ತೊಡಗಿಸುವದು. ಸಾಕು ಪ್ರಾಣಿಗಳು ಆಯಾ ಸೀಮೆಗಳಲ್ಲಿನ ಸಸ್ಯಗಳ ಮೇಲೆ ಜೀವಿಸುವವು. ಮತ್ತು ಮಾನವನು ಇಂಥ ಸಾಕು ಪ್ರಾಣಿಗಳನ್ನು ಸಾಕುವನು.

ಇದರಂತೆ, ಮೂರನೇ ಹಂತದಲ್ಲಿ, ತನಗೆ ಬೇಕಾದ ಸಸ್ಯಗಳನ್ನು ಆರಿಸಿಕೊಂಡು ಅವುಗಳನ್ನು ಸಾಕಷ್ಟು ಪ್ರಮಾಣದಲ್ಲಿ, ಒಂದೇ ಕಡೆಗೆ ಬೆಳೆಯುತ್ತ ಹೋಗುವದು. ನೈಸರ್ಗಿಕವಾಗಿ

ಬೆಳೆದ ಸಸ್ಯಗಳನ್ನು ಕಡಿದು ಒಗೆದು, ತನ್ನ ಆಹಾರ ಪೂರೈಕೆಗೆ ಬೇಕಾದ ಸಸ್ಯಗಳನ್ನು ಮಾತ್ರ ಬೆಳೆಯುವದು.

ಅನೇಕ ವ್ಯವಸಾಯ ಜನಾಂಗಗಳು ಸಾಕು ಪ್ರಾಣಿಗಳ ಜೊತೆಗೆ ಕೆಲವು ಬೆಳೆಗಳನ್ನು ಬೆಳೆದು ಪರಸ್ಪರ ಹೊಂದಿಸಿ ಕೊಂಡು ಉಪಜೀವನವನ್ನು ನಡೆಸುವದನ್ನು ಕಾಣಬಹುದು.

ಒಂದು ಸೀಮೆಯ ಜನಸಂಖ್ಯೆ ಹೆಚ್ಚುತ್ತ ಹೋದ ಹಾಗೆಲ್ಲ ಮಾನವನ ಬೇಡಿಕೆಗಳೂ ಹೆಚ್ಚುವವು. ಇದರಿಂದಾಗಿ ನಾಲ್ಕನೇ ರೀತಿಯ ಅರ್ಥ ವ್ಯವಸ್ಥೆ ಅವಶ್ಯಕವೆನಿಸುವದು. ಅದೆಂದರೆ, ಕೆಲವು ವಸ್ತುಗಳನ್ನು ನಿರ್ಮಿಸಿಕೊಟ್ಟು ಅದಕ್ಕೆ ಪ್ರತಿಫಲವಾಗಿ ತಮಗೆ ಬೇಕಾದ ಆಹಾರ ಪಡೆಯುವದು.

೪. ಮಾನವನ ಪ್ರಮುಖ ಆರ್ಥಿಕ ಚಟುವಟಿಕೆಗಳು

ಅ) ಬೇಟೆಯಾಡುವದು ಮತ್ತು ಆರಿಸುವದು

ಇದು ತೀರ ಕಾಡು ಪದ್ಧತಿ. ಕಾಡುಪ್ರಾಣಿ ಮತ್ತು ಸಸ್ಯಗಳಿಂದ ಮಾತ್ರ ಆಹಾರ ದೊರಕಿಸಲು ಬೇಟೆಯಾಡುವದು ಮತ್ತು ಅಡವಿಯಲ್ಲಿ ದೊರಕುವದನ್ನು ಆರಿಸುವದು. ಕಲ್ಲು, ಕಟ್ಟಿಗೆ, ಪ್ರಾಣಿಗಳ ತೊಗಲು ಮತ್ತು ರಸಗಳೇ ಅವನ ಇನ್ನಿತರ ನೈಸರ್ಗಿಕ ಸಂಪತ್ತು. ಇವುಗಳಿಂದ ತನ್ನ ಆಯುಧ ಮತ್ತು ಸಲಕರಣೆಗಳನ್ನು ನಿರ್ಮಿಸಿಕೊಳ್ಳುತ್ತಾನೆ. ಜೀವನ ಪೂರ್ಣವಾಗಿ ಸ್ವಾವಲಂಬಿಯಾಗಿರುವದು. ಆದರೆ ಇಂದು ಇಂಥ ಸ್ಥಿತಿಯಲ್ಲಿ ರುವ ಜನಾಂಗಗಳು ಉಳಿದಿರುವವೋ ಎಂಬುದು ಸಂಶಯ. ಈ ವೃತ್ತಿಯನ್ನು ನಡೆಸುವವರೂ ಕೂಡ ನೆರೆಯ ಜನಾಂಗಗಳ ಒಡನೆ ವ್ಯವಹರಿಸಿ ತಮಗೆ ಬೇಕಾಗುವ ಸಲಕರಣೆಗಳನ್ನು ಪಡೆ ಯುವದುಂಟು. ಮಾದಕ ಪೇಯಗಳು, ತಂಬಾಕು ಮತ್ತು ಕಬ್ಬಿಣದ ಆಯುಧಗಳು ಪೃಥ್ವಿಯ ಮೂಲೆ ಮೂಲೆಗಳಲ್ಲಿಯೂ ಹೀಗೆ ಮುಟ್ಟಿವೆಯೆಂದರೆ ತಪ್ಪಲ್ಲ.

೫. ಸದಾ ಸಂಚಾರಿಗಳಾದ ಪಶುಪಾಲಕರು

ಪೃಥ್ವಿಯ ಮೇಲೆ ವಿಸ್ತಾರವಾದ ಹುಲ್ಲುಗಾವಲು ಮತ್ತು ಋಕ್ಷ ಮರಳುಗಾಡಿನಲ್ಲಿ ಪ್ರಾಣಿಗಳನ್ನು ಸಾಕಿಕೊಂಡಿರುವ ಜನಾಂಗಗಳು ಹುಲ್ಲುಗಾವಲುಗಳಿಗಾಗಿ ಅಲೆದಾಡುವವರಾಗಿದ್ದಾರೆ. ಸಾಕುಪ್ರಾಣಿಗಳಲ್ಲದೇ ಬೇಟೆಯಾಡಿ ಮತ್ತು ಹಣ್ಣು ಹಂಪಲುಗಳನ್ನು ಆರಿಸಿಕೊಂಡು ಇವರು ತಮ್ಮ ಉಪಜೀವನ ನಡೆಸುತ್ತಾರೆ. ಇದರಿಂದಾಗಿ ಇವರು ಒಂದು ಕಡೆಯಿಂದ ಇನ್ನೊಂದು ಕಡೆಗೆ ಅಲೆದಾಡುವವರಾಗಿದ್ದಾರೆ. ಪರ್ಯಾಯವಾಗಿ ಹಲಕಾಲದ ಚಟುವಟಿಕೆ ಮತ್ತು ಕೆಲ ಕಾಲ ಆರಾಮ ಜೀವನದ ರೀತಿಯಿಂದಾಗಿ ಇವರು ಯೋಧರ ಬುದ್ಧಿ ಚಾತುರ್ಯವನ್ನು ಗಳಿಸಿಕೊಂಡಿರುವರು. ಸ್ಥಾಯಿಯಾಗಿರುವ ಜನಾಂಗಗಳಿಂದ ಸುತ್ತುವರಿಯಲ್ಪಟ್ಟ ಸಂಚಾರಿಗಳು ತಮ್ಮ ಉತ್ಪನ್ನದ ಮೇಲೆ ಜೀವಿಸುವ ಜನರಲ್ಲ. ದರೋಡೆ ಮಾಡುವದು ಇಲ್ಲವೆ ವ್ಯಾಪಾರ ಮಾಡುವವರಿಂದಾಗಿ, ಸಸ್ಯಾಹಾರ, ಅರಿವೆ, ಮತ್ತು ಸಲಕರಣೆಗಳನ್ನು ಪಡೆಯುವರು.

ಮಾಂಸ ಇಲ್ಲವೆ ಹಾಲಿನ ಪದಾರ್ಥಗಳೇ ಅವರ ಆಹಾರ ವಾಗಿದ್ದರೆ, ತೊಗಲು ಇಲ್ಲವೆ ಪ್ರಾಣಿಗಳ ಉಣ್ಣೆ, ಕೂದಲಿನಿಂದ ಅರಿವೆ ಮತ್ತು ಟೆಂಟುಗಳು (ಮನೆಗಳ) ನ್ನು ಮಾಡಿಕೊಳ್ಳು ವರು. ಕಟ್ಟಿಗೆಯನ್ನು ಮನೆಯಲ್ಲಿ ಬೇಕಾಗುವ ವಸ್ತುಗಳ ತಯಾರಿಕೆಗೆ ಉಪಯೋಗಿಸುವರು.

ಕ) ಕೃಷಿ ಜನಾಂಗ :

ಇದು ಮೂರನೆಯ ಅರ್ಥವ್ಯವಸ್ಥೆ. ಇದು ಭಿನ್ನ ಹವಾ ಮಾನದಲ್ಲಿ ವಿವಿಧ ರೂಪ ವ್ಯತ್ಯಾಸಗಳನ್ನು ತೋರಿಸುವದು. ಕೃಷಿಯಿಂದ ದೊರಕುವ ಉತ್ಪನ್ನಗಳು ಮೇಲಿನ ಎರಡೂ ವಿಧಾ ನಗಳಲ್ಲಿಯದರಕ್ಕಿಂತ ಹೆಚ್ಚಾಗಿರುವದರಿಂದ ಜನಸಂಖ್ಯೆಯು ಹೆಚ್ಚಾಗಿರುವದು. ಕೃಷಿಯಲ್ಲಿ ಪಟ್ಟ ಶ್ರಮಕ್ಕೆ ಅನುಗುಣವಾಗಿ ಮನುಷ್ಯ ಸಮೃದ್ಧವಾದ ಪ್ರತಿಫಲ ಪಡೆಯುತ್ತಾನೆ. ಅದರಿಂ ದಾಗಿ ಅಪ್ರತ್ಯಕ್ಷವಾಗಿ ಕೃಷಿಯ ಮೇಲೆ ಅವಲಂಬಿಸಿದ ಕೆಲಸಗಾ ರರೂ ಸಾಕಷ್ಟು ಸಂಖ್ಯೆಯಲ್ಲಿ ಇರುವದು ಅವಶ್ಯವಿರುವದು.

ಕುಶಲತೆ ಹೆಚ್ಚಿದಂತೆ, ಸಲಕರಣೆಗಳು ಸುಧಾರಿಸುವವು. ಉತ್ಪತ್ತಿ ಹೆಚ್ಚಾಗುವದು. ಮತ್ತು ಅಷ್ಟೇ ಭೂಮಿಯ ಮೇಲೆ ಹೆಚ್ಚಿಗೆ ಜನ ಬದುಕಬಹುದು. ಅದು ಜನಾಂಗದಿಂದ ಒಂದು ಸಮಾಜವಾಗಿ, ಮುಂದೆ ಒಂದು ಸಂಸ್ಕೃತಿಯಾಗಿ ಪರಿವರ್ತನ ಗೊಳ್ಳುವದು.

ಸಸ್ಯಪ್ರಧಾನ ಸಂಸ್ಕೃತಿಗಳು :

ದೊಡ್ಡ ಸಂಖ್ಯೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ತಜ್ಞತೆ ಯನ್ನು ಪಡೆದಂತೆಲ್ಲ ಆಯಾ ಸಮಾಜಗಳು ಸಂಕೀರ್ಣ ಅರ್ಥ

ವ್ಯವಸ್ಥೆಯ ಸಮಾಜಗಳಾಗುವವು. ಇಂಥವುಗಳನ್ನು ಎರಡು ಗುಂಪುಗಳಲ್ಲಿ ವಿಭಾಗಿಸಬಹುದಾಗಿದೆ. ಒಂದನೆಯದಾಗಿ, "ಸಸ್ಯಪ್ರಧಾನ ಸಂಸ್ಕೃತಿಗಳು." ಇದರಲ್ಲಿ ಸರಕಾರಿ ಅಧಿಕಾರಿಗಳು, ಶಿಕ್ಷಕರು, ಡಾಕ್ಟರರು, ವಕೀಲರು ಮತ್ತು ವ್ಯಾಪಾರಿಗಳಂತಹ ತಜ್ಞರ ಸಂಖ್ಯೆ ಸಾಕಷ್ಟಿದ್ದರೂ, ಉದ್ದಿಮೆಯಲ್ಲಿನ ತಜ್ಞರ ಸಂಖ್ಯೆ ಕಡಿಮೆಯಿರುವದು.

ಡ) ಯಂತ್ರಪ್ರಧಾನ ಸಂಸ್ಕೃತಿಗಳು :

ಎರಡನೆಯದಾಗಿ, ನಿರ್ಜೀವ ಶಕ್ತಿಗಳ ಸಂಯೋಜಿತ ಉಪಯೋಗದಿಂದ ಯಂತ್ರಪ್ರಧಾನ ಸಂಸ್ಥೆಗಳು ಔದ್ಯಮಿಕ ಉತ್ಪಾದನೆಯನ್ನು ಅಭಿವೃದ್ಧಿಗೊಳಿಸುವವು. ಪರಸ್ಪರ ಅವಲಂಬಿತ ಗುಂಪುಗಳು ಒಂದಕ್ಕೊಂದು ಪೂರಕ ರೀತಿಯಲ್ಲಿ ಒಟ್ಟಿನಲ್ಲಿಯ ಬೇಡಿಕೆಗಳನ್ನು ಪೂರೈಸುವ ಕೆಲಸ ಮಾಡುವವು. ಉದಾ: ಗಣಿ ಕೆಲಸ, ಕಟ್ಟಿಗೆ ಕೊರೆಯುವ ಕೆಲಸ, ಮಾನುಗಾರಿಕೆ ಇತ್ಯಾದಿ. ಇವರೆಲ್ಲ ತಮ್ಮ ಕ್ಷೇತ್ರಗಳಲ್ಲಿ ವಿಶೇಷತಜ್ಞರು. ನಿಸರ್ಗ ಸಂಪತ್ತು ಎಲ್ಲ ಕಡೆಗೆ ಹಂಚಿಹೋಗಿರುವದರಿಂದ, ಯಾವುದಾದರೊಂದು ಕೆಲಸವನ್ನು ಮಾಡುವದರ ಮುಖಾಂತರ ಇಡಿ ಸಮಾಜದ ಒಟ್ಟು ಕೆಲಸದಲ್ಲಿ ಪಾಲುಗೊಳ್ಳುವದೇ ಇಂಥ ಸಂಸ್ಕೃತಿಗಳ ವೈಶಿಷ್ಟ್ಯ.

ಕೃಷಿ, ಸಾರಿಗೆ, ವ್ಯಾಪಾರ, ಮತ್ತು ಔದ್ಯೋಗೀಕರಣದ ತಜ್ಞರು ಹೊಂದಿಕೊಂಡು ದುಡಿಯಬೇಕಾಗುವದರಿಂದ (ಇದಕ್ಕೆ ಸಂಕೀರ್ಣ ಸಂಸ್ಕೃತಿ ಎನ್ನುವೆವು) ಇವರೆಲ್ಲ ಬೇರೆ ಬೇರೆ ಕ್ಷೇತ್ರದಲ್ಲಿದ್ದರೂ ಸಾರಿಗೆ-ಸಂಪರ್ಕ ರೇಖೆಗಳು ಇವರನ್ನೆಲ್ಲ ಬಂಧಿಸಿವೆ.

ಈ ಮುಂದೆ ಮೇಲೆ ಚರ್ಚಿಸಿದ ವಿಚಾರಗಳನ್ನು ಹಲವು ವಿಶಿಷ್ಟ ಪರಿಸರಗಳಲ್ಲಿಯ ಉದಾಹರಣೆಗಳಿಂದ ಸ್ಪಷ್ಟಪಡಿಸಲಾಗುವದು.

ಇ) ವಿಷುವವೃತ್ತ ಪ್ರದೇಶ

ಇದು ಜಗತ್ತಿನ ತೀರ ಉಷ್ಣಪ್ರದೇಶ.

ಸಾಮಾನ್ಯವಾಗಿ, ಪೃಥ್ವಿಯ ಮೇಲೆ, ಈ ವಿಭಾಗಗಳು ವಿಷುವವೃತ್ತದ ದಕ್ಷಿಣಕ್ಕೂ ಉತ್ತರಕ್ಕೂ ೫° ಅಕ್ಷಾಂಶಗಳ ಪ್ರದೇಶದಲ್ಲಿ ಕಂಡು ಬರುವವು. ವರ್ಷದಾದ್ಯಂತ ಸೂರ್ಯನು ನೆತ್ತಿಯ ಮೇಲೆ ಇರುವದು, ಈ ಹವಾಮಾನದ ಪ್ರದೇಶಗಳ ವೈಶಿಷ್ಟ್ಯ. ಆದುದರಿಂದ ವರ್ಷದ ತುಂಬೆಲ್ಲ ನೇರವಾಗಿ, ಲಂಬವಾಗಿ ಸೂರ್ಯಕಿರಣಗಳು ಬೀಳುತ್ತವೆ. ಹಗಲು ರಾತ್ರಿಗಳ ಕಾಲಾವಧಿ ಕೂಡ ಸಮವಾಗಿರುತ್ತವೆ. ಇದರಿಂದಾಗಿ ಇದು ಉಷ್ಣತೆ ಹೆಚ್ಚಿಗಿರುವ ಭೂಭಾಗವಾಗಿ ಪರಿಣಮಿಸಿದೆ. ತೀರ ತಂಪಾಗಿರುವ ತಿಂಗಳದ ಸರಾಸರಿ ಉಷ್ಣತೆಯೇ ಸುಮಾರು ೬೪° ಫೆ. ಇರುವದು. ಅಂದರೆ, ಚಳಿಗಾಲದಲ್ಲಿ ಕೂಡ ಉಷ್ಣಾಂಶವು ತೀರ ಕಡಿಮೆಯಾಗುವದಿಲ್ಲವಾದ್ದರಿಂದ "ಚಳಿಗಾಲ" ಎಂದು ಕರೆಯಬಹುದಾದ ಋತು ಇರದಿರುವದು ಬಹಳ ಮಹತ್ವದ ಅಂಶವಾಗಿದೆ. ಬೇಸಿಗೆ ಚಳಿಗಾಲಕ್ಕೂ ಇರುವ ಅಂತರ ತೀರ ಅಸ್ಪಷ್ಟವಾಗಿರುವದು.

ಆದರೆ, ಇದು ಉಷ್ಣತಮ ಪ್ರದೇಶವೂ ಅಲ್ಲ. ಪರಮೋಷ್ಣಾಂಶ ೧೦೦° ಫೆ. ಗಿಂತ ಹೆಚ್ಚಾಗಿರುವದಿಲ್ಲ. ಜಗತ್ತಿನಲ್ಲಿ ಅತಿ ಹೆಚ್ಚಿನ ಉಷ್ಣತೆಯನ್ನು ನಾವು ಮರುಭೂಮಿಗಳಲ್ಲಿ

ನೋಡುತ್ತೇವೆ. ಇಲ್ಲಿ ಇನ್ನೂ ಒಂದು ಅಂಶ ಉಷ್ಣತೆಯನ್ನು ನಿಯಂತ್ರಿಸುತ್ತದೆ. ಬಹಳಷ್ಟು ಮೋಡಗಳ ಆವರಣವಿದ್ದು (ನೀರಿನ ಉಗಿಯ ಅಂಶ) ಆರ್ದ್ರತೆಯೂ ಹೆಚ್ಚಾಗಿರುವದೇ ಕಾರಣವೆಂದು ಹೇಳಬಹುದು.

ಉಷ್ಣಾಂಶದಲ್ಲಿ ಹೇಗೆ ಏರಿಳಿತಗಳು ಕಂಡು ಬರುವದಿಲ್ಲವೋ ಹಾಗೆ ಇಲ್ಲಿ ಬೀಳುವ ಮಳೆಯೂ ಕೂಡ ಒಂದೇ ರೀತಿ ಬೀಳುತ್ತಿರುತ್ತದೆ. ವರ್ಷದ ಪ್ರತಿಯೊಂದು ತಿಂಗಳಿನಲ್ಲಿ, ಕನಿಷ್ಠ ಮಾನದಲ್ಲಿ ಐದು ದಿನ ಭೋರ್ಗರೆಯುವ ಮಳೆ ತಪ್ಪಿದ್ದಲ್ಲ. ಈ ಪ್ರಮಾಣದಲ್ಲಿ ಬೀಳುವ ಮಳೆಯಿಂದಾಗಿ ದಟ್ಟವಾದ ಕಾಡುಗಳು ಬೆಳೆಯುತ್ತವೆ. ಆದರಲ್ಲಿಯೂ ಗುಡುಗು ಮಿಂಚುಗಳಿಂದ ಮಳೆಯು ಆರ್ಭಟಿಸುತ್ತ ಮಳೆಯು ೧–೨ ತಾಸಿನ ಅವಧಿಯಲ್ಲಿ ಬಿದ್ದು ನೀರೇ ನೀರು ಮಾಡಿಬಿಡುವದು. ಇಂಥ ಮಳೆಯು ಪ್ರತಿದಿನವೂ ನಿರ್ದಿಷ್ಟ ವೇಳೆಗೆ ಬೀಳುವದನ್ನು ಕೇಳಿದಾಗ, ನಾವೂ ಕೂಡ ಅಲ್ಲಿ ಇದ್ದಿದ್ದರೆ ಚೆನ್ನಾಗಿರುತ್ತೆಂದು ನಮ್ಮ ರೈತರು ಅನ್ನಬಹುದು. ವರ್ಷದ ಸರಾಸರಿಯನ್ನು ತೆಗೆದರೆ ಸುಮಾರು ೮೦ರಿಂದ ೧೦೦ ಇಂಚುಗಳ ವರೆಗೆ ಆಗಬಹುದು.

ಇಲ್ಲಿ, ಪರಿಸರದ ಪ್ರಭಾವವೊಂದನ್ನು ನೇರವಾಗಿ ಗುರುತಿಸಬಹುದಾಗಿದೆ. ವರ್ಷದ ತುಂಬ ಬೀಳುವ ಮಳೆ, ಉಷ್ಣವಾಗಿಯೂ ಹಾಗೂ ಅರ್ದ್ರವಾಗಿಯೂ ಇರುವ ಹವೆಯಿಂದಾಗಿ ಇಂಥ ಪ್ರದೇಶದಲ್ಲಿಯ ಸಸ್ಯ ಸಾಮ್ರಾಜ್ಯ ಬಹು ಸಮೃದ್ಧವಾಗಿಯೂ ವೈವಿಧ್ಯಮಯವಾಗಿಯೂ ರೂಪುಗೊಳ್ಳುತ್ತದೆ. ಜಗ

ತ್ರಿನ ಯಾವುದೇ ನೈಸರ್ಗಿಕ ವಿಭಾಗಗಳಲ್ಲಿ ಇಲ್ಲಿ ಕಾಣುವಷ್ಟು ಸೊಕ್ಕಿನಿಂದ ಬೆಳೆದ ಅಡವಿಯ ಗಿಡಗಂಟಿಗಳು ಕಾಣುವದು ದುಸ್ತರ. ದಟ್ಟ ಅಡವಿಗಳ ವಿಷಯದಲ್ಲಿ ಇದು ಪ್ರಥಮ ಪಂಕ್ತಿಗೆ ಸೇರುತ್ತದೆ. ಬಿಡಿ ಬಿಡಿಯಾದ ಗಿಡಗಂಟಿಗಳನ್ನೂ ಮತ್ತು ಜಾಲಿ, ಈಚಲಮರಗಳನ್ನಷ್ಟೇ ಕಂಡ ಬಯಲು ಸೀಮೆ ಯವರಿಗೆ ಇಲ್ಲಿ ಕಾಣುವ ಅಡವಿಗಳ ಕಲ್ಪನೆ ಕೂಡ ಬರುವದು ದುಸ್ತರ.

ಸಸ್ಯ:— ಮಣ್ಣು ಫಲವತ್ತಾಗಿರುವ ಜಾಗಗಳಲ್ಲಿ ಮೂರು ಅಂತಸ್ತಿನ ಸಸ್ಯ ಸೃಷ್ಟಿಯ ಸ್ವರ್ಗವೇ ಕಾಣುವದು. ನೂರಿಪ್ಪತ್ತೈದು ಫೂಟು ಎತ್ತರವಿರುವ ಗಿಡಗಳು ಮೇಲೆ ಎದ್ದು ಕಾಣುವವು. ಇದರ ಕೆಳಗಡೆ ಕಡಿಮೆ ಎತ್ತರದ ಗಿಡಗಳು ಮತ್ತು ನೆಲಸಮಕ್ಕೆ ಚಿಕ್ಕ ಗಿಡಗಂಟಿಗಳು ಇಡೀ ಭೂಮಿಯನ್ನು ಆಕ್ರಮಿಸುತ್ತವೆ. ಗಿಡಗಳಿಂದ ಉದುರಿದ ಎಲೆಗಳು ಹಸಿರು ಜಮಖಾನೆಯನ್ನು ಹಾಸಿದಂತಿರುತ್ತದೆ. ಹವೆಯು ಸದಾಕಾ ಲವೂ ಆರ್ದ್ರವಾಗಿರುವದರಿಂದ, ಗಿಡಗಳನ್ನು ಬಳ್ಳಿಗಳು ಆಧ ರಿಸಿ ಅವಲಂಬಿಸಿ ಸುತ್ತಿಹಾಕಿಕೊಂಡಿರುತ್ತವೆ. ಸೂರ್ಯಕಿರಣ ವನ್ನು ಪಡೆಯುವದಕ್ಕಾಗಿ ಗಿಡಗಳು ಆಕಾಶದ ಕಡೆಗೆ ಬೆಳೆಯು ವಲ್ಲಿ ಒಂದಕ್ಕೊಂದು ಸ್ಪರ್ಧೆಗೆ ಇಳಿದಿವೆಯೊ ಏನೊ ಎಂಬಂತೆ ಕಾಣುವವು. ತುದಿಗಳು ಒಂದಕ್ಕೊಂದು ಹತ್ತಿದಲ್ಲಿ ರೆಂಬೆ ಗಳು ಒಂದನ್ನೊಂದು ಬಳಸಿಕೊಳ್ಳುವವು. ಹೀಗೆ ನಿರ್ಮಿಸಿದ ಛತ್ತು ಮರೆಯಾಗುವಲ್ಲಿ ನೆಲದ ಮೇಲೆ ಸಸ್ಯಗಳು ಕಡಿಮೆ ಇರುತ್ತವೆ.

ಇಂಥ ಪರಿಸ್ಥಿತಿಯಲ್ಲಿ ನಿರ್ಮಿತವಾದ ಮಣ್ಣುಗಳು ಫಲವತ್ತಾಗಿರುವದಿಲ್ಲ. ಇದು ವಿರೋಧಾಭಾಸದಂತಿದೆ. ಸಸ್ಯ ಸಮೃದ್ಧಿಯನ್ನು ನೋಡಿದರೆ ಮಣ್ಣು ಫಲವತ್ತಾಗಿರಬೇಕೆಂದಿನಿಸಿದರೂ ನಿಜ ಸ್ಥಿತಿಯು ತದ್ವಿರುದ್ಧವಾಗಿದೆ. ಇದಕ್ಕೆ ಮೂಲ ಕಾರಣ ಅಖಂಡವಾಗಿ ಬೀಳುವ ಮಳೆ ಮತ್ತು ಹೆಚ್ಚಿನ ಆರ್ದ್ರತೆ. ಈ ಪರಿಸ್ಥಿತಿಯಲ್ಲಿ "ಲಾಟರಾಯಿಟ" ಜಾತಿಯ ಮಣ್ಣು ತಯಾರಾಗುತ್ತದೆ. ಶಿಲೆಗಳಲ್ಲಿಯ ಸಸ್ಯೋಪಯೋಗಿ ಲವಣಗಳೆಲ್ಲ ಕೆಳಗಿನ ಪದರುಗಳಲ್ಲಿ ಇಳಿಯುವ ಕಾರ್ಯ ಅನಂತವಾಗಿ ನಡೆಯುವದರಿಂದ ಲವಣಗಳನ್ನು ಕಳೆದುಕೊಂಡ ಲಾಟರಾಯಿಟ ಉತ್ಪತ್ತಿಯಾಗುವದೆಂದು ಹೇಳುತ್ತಾರೆ.

ಮೇಲೆ ಕಾಣಲು ಸಮೃದ್ಧ ಸಸ್ಯಗಳಿದ್ದರೂ ಮಣ್ಣಿನಲ್ಲಿರಬೇಕಾದ, ಹುಮುಸ್ (ಕೊಳೆತ ಎಲೆಗಳು ರಾಸಾಯನಿಕ ಕ್ರಿಯೆಗೆ ಒಳಗಾಗಿ ಹುಟ್ಟಿಕೊಳ್ಳುವ ವಸ್ತು) ಉಷ್ಣ ಆರ್ದ್ರ ಹವೆಯಲ್ಲಿ ಜೀವಾಣುಗಳು ನಾಶಹೊಂದುವದರಿಂದ ಕಡಿಮೆ ಪ್ರಮಾಣದಲ್ಲಿರುತ್ತದೆ.

ಮೇಲಿನ ಚರ್ಚೆಯಿಂದ ಈ ಪ್ರದೇಶಗಳಲ್ಲಿ ಮಾನವ ಜೀವನಕ್ಕೆ ಅನೇಕ ಕಠಿಣವಾದಮಿತಿಗಳನ್ನೂ ಮತ್ತು ದುರ್ಬಲತೆಯನ್ನೂ ನಿಸರ್ಗ ವೃತಂದೊಡ್ಡಿರುವುದು ಕಂಡುಬರುತ್ತದೆ.ಸಮೃದ್ಧವಾದ ಅಡವಿಗಳು ಮಾನವನಿಗೆ ಒಂದು ದೊಡ್ಡ ಆತಂಕವಾಗಿ ಪರಿಣಮಿಸಿವೆ. ಜೀವನಾವಶ್ಯಕ ವಸ್ತುವಿನ ಶೋಧವಾಗಲೀ ಅವುಗಳನ್ನು ಬೆಳೆಯುವದಾಗಲೀ, ಅಸಾಧ್ಯವಾಗುವಷ್ಟು ಅಡವಿಗಳು ಬೆಳೆದಿರುತ್ತವೆ. ಅಡವಿಗಳಿಗೆ ಬೆಂಕಿ ಹಚ್ಚಿ ಭಸ್ಮ ಮಾಡಿ

ಭೂಮಿ ನಿರ್ಮಿಸಿದರೂ ಮತ್ತೆ ಮರು ವರುಷ ಹೊಲಗಳೂ, ರಸ್ತೆಗಳೂ ಎಲ್ಲವನ್ನು ಹಾಳು ಮಾಡಿ ಅಡವಿಗಳು ಆಕ್ರಮಿಸಿ ಕೊಂಡು ಬಿಡುತ್ತವೆ.

ಸೆಖೆ ಮತ್ತು ಆರ್ದ್ರತೆ ಎರಡೂ ಹೆಚ್ಚಿಗಿರುವದರಿಂದ ಮನುಷ್ಯನಿಗೆ ಕೆಲಸ ಮಾಡಲು ಉತ್ಸಾಹ ಶಕ್ತಿಗಳ ಹ್ರಾಸವಾಗುತ್ತದೆ. ಆದರೆ ಹುಳ ಹುಪ್ಪಡಿಗಳಿಗೆ ಇಂಥ ಹವೆಯು ಬಹಳ ಒಳ್ಳೆಯದಂತೆ. ಹೀಗಾಗಿ ಮನುಷ್ಯನಿಗಿಂತ ಈ ಪ್ರದೇಶ ಸಸ್ಯಗಳಿಗೂ ಹುಳಹುಪ್ಪಡಿಗಳಿಗೂ ಬಹಳ ಪ್ರಯೋಜನಕಾರಿ ಎಂಬುದು ಭೌಗೋಲಿಕ ಪರಿಸರದ ನೇರ ಪ್ರಭಾವವೆಂದು ನಿಸ್ಸಂಶಯವಾಗಿ ಹೇಳಬಹುದು.

ಹುಳುಗಳಿಂದಾಗಿ ಮನುಷ್ಯನು ಮಲೇರಿಯಾ ಜ್ವರ ಬಾಧೆ, ಶಯನರೋಗ ಮುಂತಾದ ರೋಗಗಳಿಗೂ ಬಲಿಯಾಗುತ್ತಾನೆ. ಒಟ್ಟಿನಲ್ಲಿ ಅನಾರೋಗ್ಯಕರವಾದ ವಾತಾವರಣವಿದೆ ಎಂದೆನ್ನಬಹುದು. ಪ್ರಾಣಿಗಳನ್ನು ಸಾಕಿಕೊಂಡಿರುವದೂ ಕೂಡ ಅಶಕ್ಯವಾದ ಮಾತೇ ಸರಿ. ಜಿಟ್ಟೆಗಳ ಕಡಿತದಿಂದ ಪ್ರಾಣಿಗಳಿಗೂ ರೋಗ ಬಂದು ಅವು ಸಾಯುತ್ತವೆ. ಇದರಿಂದಾಗಿ ಎಳೆಯುವ ಪ್ರಾಣಿಗಳ ಕೊರತೆಯಾಗಿ ಒಂದು ಜಾಗೆಯಿಂದ ಇನ್ನೊಂದು ಜಾಗೆಗೆ ಹೋಗುವದು ಕಠಿಣವೆನಿಸುವದು. ಇದರಿಂದಾಗಿ ಸಂಚಾರ ಮತ್ತು ಪರಸ್ಪರ ಸಂಬಂಧವಿಲ್ಲದಂಥ ಪರಿಸ್ಥಿತಿ ಜನಾಂಗಗಳಿಗೆ ಒದಗಿದೆ. ಹೊಸದಾದ ಮುನ್ನಡೆಯುವ ರೀತಿ ವಿಚಾರಗಳು ಇವರ ಸಮೀಪ ಹಾಯುವ ಹಾಗಿಲ್ಲ. ಸರ್ವಕಾಲವೂ ಬಿತ್ತಿಗೆ ಮತ್ತು ಕೊಯ್ಯುವ ಕಾರ್ಯ ಸಾಧ್ಯವಿ

ದ್ದರೂ ಕಸಾವಾ, ಯಾಮು, ಗೆಣಸು ಮತ್ತು ಇನ್ನಿತರ ಗಡ್ಡೆ ಬೇರುಗಳನ್ನು ಮಾತ್ರ ಬೆಳೆಯಬಹುದು. ಇದು ತೀರ ಪುರಾತನವಾದ ಬೆಳೆಯುವ ಪದ್ಧತಿ. ಇನ್ನೂ ಅದೇ ಹಂತದಲ್ಲಿಯೇ ಉಳಿದಿದ್ದಾರೆ. ಕಳೆ ತೆಗೆಯುವದೂ ಒಂದು ಅತಿ ಶ್ರಮದ ಕಾರ್ಯ. ಏಕೆಂದರೆ "ಮಂತ್ರಕ್ಕಿಂತ ಉಗುಳು ಹೆಚ್ಚೆಂ"ಬಂತೆ ಬೆಳೆಗಿಂತ ಕಳೆಯೇ ಹೆಚ್ಚು ಭಾಗವನ್ನು ಆಕ್ರಮಿಸಿಕೊಳ್ಳುವದು ಸ್ವಾಭಾವಿಕ. ಮೂರು ನಾಲ್ಕು ಸಲ ಬೆಳೆ ತೆಗೆದುಕೊಂಡಾಗ ಮಣ್ಣು ನಿಸ್ಸತ್ವವಾಗಿ ಉತ್ಪಾದನೆಯ ಸಾಮರ್ಥ್ಯವನ್ನು ಕಳೆದುಕೊಂಡು ಬಿಡುತ್ತದೆ. ಪ್ರತಿಸಲವೂ ಹೊಸ ಹೊಸ ಅಡವಿಗಳನ್ನು ಹಾಳು ಮಾಡಿ ಹೊಸ ಜಮೀನು ತಯಾರಿಸಬೇಕಾಗುವದು. ಇಂತಹ ಭೌಗೋಲಿಕ ಪ್ರಭಾವದಿಂದ ಜನಜೀವನ ಅಸ್ಥಿರವಾಗುತ್ತದೆ. ಸ್ಥಳದಿಂದ ಸ್ಥಳಕ್ಕೆ ಚಲಿಸುವ ಜನಾಂಗ ಅನಿವಾರ್ಯವಾಗುತ್ತದೆ. ಜೀವನ ರೀತಿಗೂ ಭೌಗೋಲಿಕ ಪರಿಸರದ ಪ್ರಭಾವಗಳಿಗೂ ನೇರವಾದ ಸರಳವಾದ ಸಂಬಂಧವನ್ನು ಇಲ್ಲಿ ಕಾಣುತ್ತೇವೆ.

ಸಂಚಾರಿ ಒಕ್ಕಲುತನದಿಂದ ಸಾಕಷ್ಟು ಆಹಾರ ದೊರಕುವದಿಲ್ಲ. ಅಡವಿಗಳಲ್ಲಿ ದೊರಕುವ ಹಣ್ಣು ಹಂಪಲಗಳನ್ನು ಕೂಡಿ ಹಾಕುವದು ಮತ್ತು ಪ್ರಾಣಿಗಳನ್ನು ಬೇಟೆಯಾಡಿ ಬೇಯಿಸಿ ತಿನ್ನುವದರಿಂದ ಕೊರತೆಯನ್ನು ಹಿಂಗಿಸಿಕೊಳ್ಳಬೇಕಾಗುವದು. ಹೀಗೆ ವಿಶಿಷ್ಟವಾದ ಚಟುವಟಿಕೆಯು ಅನಿವಾರ್ಯವೆನಿಸುವದು. ಇದರಿಂದಾಗಿ ಮೂಲತಃ ಬೇಟೆಗಾರ ಜನಾಂಗ ರೂಪಗೊಳ್ಳುತ್ತವೆ.

ಜೀವನಕ್ಕೆ ಅನುಕೂಲವಾಗಿರದ ಇಂಥ ಪ್ರದೇಶಗಳಲ್ಲಿ ನಿಸರ್ಗವು ಜನಜೀವನದ ವಿಧಾನಗಳನ್ನು ನಿರ್ಣಯಿಸುತ್ತದೆ ಎಂದು ಹೇಳಬಹುದು. ಇದನ್ನು ನಿಸರ್ಗ ನಿರ್ಣಯವಾದದ ಉದಾಹರಣೆಯೆನ್ನಬಹುದು. ಇಂದಿನ ಜಗತ್ತು ಇಷ್ಟು ಸುಧಾರಿಸಿದ್ದರೂ, ಇಂಥ ಅಸಂಸ್ಕೃತ ಅಡವಿ ಜನರ ಗುಂಪುಗಳನ್ನು ನೋಡಬಹುದಾಗಿದೆ.

ಪೂರ್ವ ಆಫ್ರಿಕೆಯಲ್ಲಿಯ ಪಿಗ್ಮಿಗಳು, ಅಥವಾ ಬುಶ್ ಮೆನ್, ದಕ್ಷಿಣ ಅಮೇರಿಕೆಯ "ನಿಗ್ರೊ" ಜನರು ಮೇಲೆ ಹೇಳಿದ ಭೌಗೋಲಿಕ ಪರಿಸರದಲ್ಲಿ ಕಂಡುಬರುವ "ಮೂಲ ಮಾನವ" ರಾಗಿದ್ದಾರೆ. ಭೌಗೋಲಿಕ ಪರಿಸರ ಅವರಿಗೆ ಬಹಳ ಕ್ರೂರ ವಾಗಿದೆ. ಆದ್ದರಿಂದ ವ್ಯವಸ್ಥಿತ ಗೃಹ, ವಸ್ತುಸಂಗ್ರಹ ಮತ್ತು ಸುಖಸೌಖ್ಯಗಳು ಇರುವದಿಲ್ಲ. ಇವರು ಮನೆ ಕಟ್ಟುವದೇ ಇಲ್ಲ ಎಂಬುದನ್ನು ಕಲ್ಪಿಸಲು ಕೂಡ ನಮಗೆ ಸಾಧ್ಯವಾಗುವದಿಲ್ಲ.

ಬಟ್ಟೆಯ ಅವಶ್ಯಕತೆಯೇ ಬೀಳುವದಿಲ್ಲ. ಅದಕ್ಕಾಗಿಯೇ ಅವರಿಗೆ ಅಸಂಸ್ಕೃತ ಜನಾಂಗ ಎಂದದ್ದು. ಅದು ಅವರನ್ನು ಹೀಯಾಳಿಸುವದಕ್ಕಲ್ಲ. ಜನಜೀವನದ ವೈವಿಧ್ಯವನ್ನು ತಿಳಿಯಲು ಮತ್ತು ಭೌಗೋಲಿಕ ಪರಿಸರದ ನೇರ ಪ್ರಭಾವಗಳನ್ನು ಕಂಡುಹಿಡಿಯಲು ಮಲಾಯಾದ ಸಿಮಾಂಗರ ಉದಾಹರಣೆಯನ್ನು ತೆಗೆದುಕೊಂಡು ವಿವರವಾಗಿ ತಿಳಿದುಕೊಂಡಾಗ, ಪ್ರಭಾವಗಳೂ ನಿಯಂತ್ರಕ ಕಾರಣಗಳೂ ತಿಳಿದು ಬರುತ್ತವೆ.

ಈ ಜನರು ಬಿಲ್ಲು ಬಾಣಗಳ ಬೇಟೆಗಾರಿಕೆಯನ್ನು ಅರಿಸಿಕೊಂಡಿದ್ದಾರೆ. ಬಾಣಗಳಿಗೆ ವಿಷಪದಾರ್ಥವನ್ನು ಹಚ್ಚಿರುತ್ತಾರೆ. ಗಂಡಸರು ಅಡವಿಗಳಲ್ಲಿ ಬೇಟೆಗೆ ಹೋದರೆಂದರೆ ಹೆಂಗಸರು ಅಡವಿಯಲ್ಲಿ ಹಣ್ಣು ಹಂಪಲುಗಳನ್ನು ಅರಿಸಿಕೊಂಡು ಬರಲು ಹೋಗುತ್ತಾರೆ. ಬಿದಿರು ಗಳದಿಂದ ತಮಗೆ ಬೇಕಾಗುವ ಅನೇಕ ವಸ್ತುಗಳನ್ನು ತಯಾರಿಸುತ್ತಾರೆ.

ಈ ಜನಾಂಗದ ಸಾಮಾಜಿಕ ಜೀವನವು ತೀರ ಕೆಳಮಟ್ಟದ್ದಿರುತ್ತದೆ.

೬. ಧ್ರುವ ಪ್ರದೇಶಗಳಲ್ಲಿಯ ಭೌಗೋಲಿಕ ಪರಿಸರ

ಜಗತ್ತಿನ ಸಕಲ ಭೂಭಾಗಗಳಲ್ಲಿ ಇದು ತೀರ ತಂಪಾದ ಪ್ರದೇಶ. ಇಂಥ ತಂಪಾದ ಪ್ರದೇಶದಲ್ಲಿ ಸಸ್ಯ ವರ್ಗದ ಬೆಳವಣಿಗೆ ಇರುವದಿಲ್ಲ. ಸಾಮಾನ್ಯವಾಗಿ ಅಸಂಖ್ಯ ಸಸ್ಯಗಳನ್ನು ಕಂಡ ನಮಗೆಲ್ಲ ಇದು ಒಂದು ಆಶ್ಚರ್ಯವೇ ಸರಿ. ಹಾವಸೆಗೆ ನಾವು ಸಸ್ಯದ ಸ್ಥಾನ ಕೊಡುವದಿಲ್ಲ. "ಹಾಳೂರಿಗೆ ಉಳಿದವನೇ ಗೌಡ " ಎಂಬಂತೆ ಹಾವಸೆಯೇ ಇಲ್ಲಿ ಸಸ್ಯವೆನ್ನಿಸಿಕೊಳ್ಳುತ್ತದೆ. ವರ್ಷದ ತುಂಬೆಲ್ಲ ಹಿಮದಿಂದ ಮುಚ್ಚಿಕೊಂಡು, ಸ್ವಲ್ಪ ಕಾಲಾವಧಿಯ ಬೇಸಿಗೆಯಲ್ಲಿ ಮಾತ್ರ ಕೆಲವು ಅಡವಿ ಹೂಗಳು ಅರಳುತ್ತವೆ. ಪೀಕ್ಸ್, ಲಿಚೆನ್ ಮತ್ತು ಲೋ ವಿಲ್ಲೋಸ್ ಇವೇ ಇನ್ನಿತರ ಸಸ್ಯವರ್ಗ.

ಇಂಥ, ದೇವರ ಅವಕೃಪೆಗೆ ಗುರಿಯಾದ ಪ್ರದೇಶದಲ್ಲಿ ಕೆಲವು ಜನಾಂಗಗಳು ಬದುಕುತ್ತವೆ. ಎಸ್ಕಿಮೋ, ಲ್ಯಾಪ್. ಸೇಮಾಯಿಡ್ ಜನರು ತಮ್ಮ ಜೀವನವನ್ನು ಭೌಗೋಲಿಕ

ಪರಿಸ್ಥಿತಿಗೆ ಬಹು ಪ್ರಯಾಸದಿಂದ ಹೊಂದಿಸಿಕೊಂಡು ಬದುಕು ವರು. ಇವರೂ ಕೂಡ ಉಷ್ಣವಲಯದ ಪಿಗ್ಮಿಗಳಂತೆ ಅನಾಗರಿಕ ಪರಿಸ್ಥಿತಿಯಲ್ಲಿ ಉಳಿದಿದ್ದಾರೆ. ಈಗಲೂ ಕೂಡ ಇವರು ಬೇಟೆಗಾರಿಕೆ ಮತ್ತು ಮೀನು ಹಿಡಿಯುವದನ್ನು ತಮ್ಮ ಮೂಲೋದ್ಯೋಗವನ್ನಾಗಿ ಮಾಡಿಕೊಂಡಿದ್ದಾರೆ. ದೇಹದಾರ್ಢ್ಯ ಚೆನ್ನಾಗಿದ್ದರೂ ಕೂಡ ಕುಳ್ಳರಿರುತ್ತಾರೆ. ಮುಖ ಮತ್ತು ಕಣ್ಣುಗಳು ವಿಶಿಷ್ಟವಾಗಿ ಭಿನ್ನವಾಗಿರುತ್ತವೆ. ಮೂಲತಃ ಏಶಿಯಾದಿಂದ ಈ ಜನಾಂಗ ಬಂದಿದ್ದು "ಮಂಗೋಲಾಯ್ಡ" ರೂಪರೇಷೆಯನ್ನು ಹೊಂದಿರುವರೆಂದು ಮಾನವ ಶಾಸ್ತ್ರಜ್ಞರ ಹೇಳಿಕೆ.

ಉತ್ತರ ಸ್ಕಾಂಡಿನೇವಿಯಾ ಮತ್ತು ಫಿನ್‌ಲ್ಯಾಂಡ್, ರಸಿಯಾದ ಉತ್ತರ ಪಶ್ಚಿಮ, ನೈಜೀರಿಯಾದ ಪೂರ್ವ ಭಾಗ ಮತ್ತು ಅಲಾಸ್ಕ ಲಾಬ್ರೊಡೋರ್ ಮುಂತಾದ ಪ್ರದೇಶಗಳಲ್ಲಿ ಈ ಜನಾಂಗಗಳು ಕಂಡುಬರುವವು.

ಎಸ್ಕಿಮೊಗಳನ್ನು ಈ ಭೌಗೋಲಿಕ ಪರಿಸರದ ಪ್ರಭಾವದಲ್ಲಿ ಜೀವಿಸುವವರಲ್ಲಿ ಪ್ರಾತಿನಿಧಿಕ ಜನಾಂಗವೆಂದು ತೆಗೆದುಕೊಳ್ಳಬಹುದು. ಅವರ ವಾಸಸ್ಥಾನ, ನಾವೆಗಳು, ಸಾಗಾಣಿಕೆಯ ಸಾಧನ, ಬಿಲ್ಲು ಬಾಣಗಳು ಮತ್ತು ವಸ್ತುಗಳು ಭೌಗೋಲಿಕ ಪರಿಸರಕ್ಕೆ ನೇರವಾಗಿ ಹೊಂದಿಕೊಂಡಿವೆ ಎಂಬುದನ್ನು ಅಸಂದಿಗ್ಧವಾಗಿ ತಿಳಿಯಬಹುದಾಗಿದೆ.

ಹೆಚ್ಚಾಗಿ ನೆಲವು ಹಿಮದಿಂದ ಮುಚ್ಚಿದ್ದಿರುತ್ತದೆ ಎಂದು ಈಗಾಗಲೇ ತಿಳಿಯಲಾಗಿದೆ. ಚಳಿಗಾಲದ ಮಧ್ಯದ ಸುಮಾರಿಗೆ ಸೂರ್ಯನ ಬೆಳಕೇ ಇಲ್ಲದಾಗುತ್ತದೆ. ಬೇಸಿಗೆಯು ಅವ

ಧಿಯೇ ತೀರ ಚಿಕ್ಕದಾಗಿರುವದು. (ಚಳಿಗಾಲದ ಉಷ್ಣಾಂಶ ೫೦° ಫೆ. ಮತ್ತು ಬೇಸಿಗೆಯಲ್ಲಿ ಸೂರ್ಯ ೩೦° ಫೆ.).ಆಗಲೇ ಹಾವಸೆಯ ಜಾತಿಯ ಅನೇಕ ಸಸ್ಯಗಳು ಬೆಳೆಯುವವು.

ಇಂಥ ಭೌಗೋಲಿಕ ಪರಿಸರದಲ್ಲಿ ಜನಜೀವನಕ್ಕೆ ಆಧಾರ ವೆಂದರೆ, ಬೇಟೆ, ಮೀನು ಹಿಡಿಯುವದು ಮತ್ತು ದನಗಳ ಪೋಷಣೆ. ಇವುಗಳಲ್ಲಿ ಯಾವದಾದರೊಂದು ರೀತಿಯ ಜೀವನ ವಿಧಾನ ನಡೆಸಬೇಕು. ಗಿಡಗಳಾಗಲೀ, ಬೆಳೆಗಳಾಗಲೀ ಬೆಳೆಯ ಲಾರದಂಥ ಹವಾಮಾನ ಮತ್ತು ಮಂಜು ಗಡ್ಡೆ ಹೊಚ್ಚಿದ ಭೂಮಿ ಇರುವಲ್ಲಿ ಇವೇ ಉಳಿದ ಮಾರ್ಗ. ನಿಸರ್ಗ ಅಥವಾ ಪರಿಸರ ಮನುಷ್ಯನ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ, ನಿರ್ಧ ರಿಸುತ್ತದೆ ಎಂಬುದಕ್ಕೆ ಇದು ಉತ್ತಮ ಉದಾಹರಣೆ. ಆದ್ದ ರಿಂದ ಎಸ್ಕಿಮೊಗಳು ಬೇಟೆಯಾಡುವದರಲ್ಲಿ ನೈಪುಣ್ಯ ಹೊಂದಿ ದ್ದಾರೆ.

ಅವರ ಆರೋಗ್ಯ, ಸೌಖ್ಯ ಮತ್ತು ಆನಂದದ ಅಪೇಕ್ಷೆ, ಒಟ್ಟಿನಲ್ಲಿ ಅವರ ಜೀವನವೇ ಬೇಟೆಗಾರಿಕೆಯಲ್ಲಿಯ ಯಶಸ್ಸಿನ ಮೇಲೆ ಅವಲಂಬಿಸಿದೆ.

ಅವರು ಉಪಯೋಗಿಸುವ ವಸ್ತುಸಂಗ್ರಹವೆಲ್ಲವೂ ಪ್ರಾಣಿಗಳಿಂದ ಬಂದಿದ್ದು. (ಕೊಡ್‌ಸೀಲ್ಸ್) ಕೆಲವೇ ಆಯುಧ ಗಳ ಸಹಾಯದಿಂದ ದೊಡ್ಡ ಪ್ರಾಣಿಗಳನ್ನು ಬೇಟೆಯಾಡುವ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. (ಹಾರ್ಪೋನ್ಸ್, ಸ್ಪೇರ್, ಬಾಡ್ರಿಲ್ಸ್) ನಾಯಿಗಳನ್ನು ಮಾತ್ರ ಸಾಕುವ ರೂಢಿ ಇದೆ.

ಚಳಿಗಾಲದಲ್ಲಿ ಸೀಲುಗಳ ಬೇಟೆಯಾಡುವದು ಪ್ರಾಮು ಖ್ಯವಾದುದು. ಅದಕ್ಕೆ ಚಳಿಗಾಲದಲ್ಲಿ ಸಮುದ್ರ ದಂಡೆಯು ಮೇಲೆ ವಾಸ್ತವ್ಯ ಮಾಡುತ್ತಾರೆ. ದಂಡೆಗೆ ತೀರ ಸಮೀಪ ಬರುವ ಸೀಲುಗಳನ್ನು ದೊಡ್ಡ ಪ್ರಮಾಣದಲ್ಲಿ ಬೇಟೆಯಾಡು ತ್ತಾರೆ. ಸೀಲ್ ಎಣ್ಣೆಯನ್ನು ದೀಪ ಹಚ್ಚಲು ಉಪಯೋಗಿ ಸುವರು. ಅದರಿಂದ ವಸ್ತ್ರ. ಆಹಾರ ಮತ್ತು ಅನೇಕ ಉಪ ಯೋಗವಿದೆ.

ಚಿಕ್ಕದಾದ ಬೇಸಿಗೆಯ ಅವಧಿಯಲ್ಲಿ ಕಾರಿಬೂ ಗಳ ಹಿಂಡು ತನ್ನ ಆಹಾರವನ್ನು ಹುಡುಕುತ್ತಾ ಹೋಗುವದು. ಆಗ ಅವುಗ ಳನ್ನು ಬೇಟೆಯಾಡುವದು ಎಸ್ಕಿಮೋಗಳ ಕಾರ್ಯ.

ಕಾಯರ್ ಎಂದು ಕರೆಯುವ ಇಕ್ಕಟ್ಟಾದ ಚೂಪಾದ ನಾವೆಗಳಿಗೆ ತೊಗಲಿನ ಹೊದಿಕೆ ಹಾಕಿರುವರು. ಇವುಗಳ ಸಹಾಯದಿಂದ ಇವರ ಬೇಟೆಯ ಕಾರ್ಯಕ್ರಮ ವೈಶಿಷ್ಟ್ಯ ಪೂರ್ಣವಾಗಿರುವದು. ಸೀಲ್, ವ್ಹೇಲ್, ಮತ್ತು ವಾಲ್‌ರೂಸ್‌ಗ ಳನ್ನು ಬೇಟೆಯಾಡಿದರೂ ಇವುಗಳಲ್ಲಿ " ಉಂಗುರ ಸೀಲು " ಬಹು ಮಹತ್ವದ್ದಾಗಿದೆ.

ಆದುದರಿಂದ ಸೀಲು ಮತ್ತು ಮೀನುಗಳು ಎಲ್ಲಿ ಹೆಚ್ಚಾ ಗಿರುವವೋ ಅಲ್ಲಿಗೆ ಅವುಗಳ ಬೆನ್ನು ಹತ್ತಿ, ದೊಡ್ಡವಾದ ಉಮೇಕ ನಾವೆಗಳಲ್ಲಿ ಸಂಚರಿಸುವರು. ಇದಲ್ಲದೆ ಧ್ರುವದ ಕರಡಿ, ನರಿ ಮತ್ತು ಅವುಕ್, ಡಕ್, ಗ್ರೀಸ್‌ಗಳನ್ನು ಬೇಟೆಯಾಡು ವರು. ಹೀಗೆ ಜನಜೀವನ ಋತುಗಳಿಗೆ ಅನುಸರಿಸಿ ತಾಳಹಾಕುತ್ತ ದಲ್ಲದೆ, ಚಳಿಗಾಲದಲ್ಲಿ ಒಂದು ಕಾರ್ಯ ಮತ್ತು ಬೇಸಿಗೆಯಲ್ಲಿ ಇನ್ನೊಂದು ರೀತಿ ಹೀಗೆ ಅದಲು ಬದಲು ನಡೆಯುತ್ತದೆ.

ಇವರ ಸಂಸ್ಕೃತಿಯ ಮಟ್ಟವನ್ನು ತಿಳಿಯಲು ಒಂದೇ ವಿಷಯ ಸಾಕು. ಸ್ನಾನ ಮಾಡುವದರ ಮಹತ್ವ ಈ ಜನರಿಗೆ ಇನ್ನೂ ತಿಳಿದಿಲ್ಲ. ಅವರು ತಮ್ಮ ವಸ್ತ್ರಗಳನ್ನು ಹರಿದಾಗಲೇ ಅವನ್ನು ಬದಲಿಸುವ ಪರಿಪಾಠ. ಭಾರತೀಯ ಜೀವನದಲ್ಲಿ ಸ್ವಚ್ಛ, ಶುದ್ಧವಾದ ವಸ್ತ್ರಗಳನ್ನು ಹಾಕುವದು, ಪ್ರತಿದಿನವೂ ಮೈ ಉಜ್ಜಿ ಸ್ನಾನ ಮಾಡುವದೂ ಬಹಳ ಮಹತ್ವದ ಆಚಾರಗಳು. ಅಂಥವರಿಗೆ, ಎಸ್ಕಿಮೋಗಳಿಗೆ ಸ್ನಾನದ ವಿಚಾರವೇ ಗೊತ್ತಿಲ್ಲ ಎಂದರೆ ನಗಬೇಕೋ ಅಳಬೇಕೋ ಗೊತ್ತೇ ಆಗುವದಿಲ್ಲ. ಇಂಥ ಹೊಲಸು ಚಟಗಳಿಂದಾಗಿ ಮತ್ತು ಅನಾರೋಗ್ಯಕರ ಪರಿಸರದಲ್ಲಿ ಜೀವಿಸುವದರಿಂದ ಆಯುಷ್ಯ ಕಡಿಮೆ ಎಂದು ಹೇಳುತ್ತಾರೆ. ಅವರ ಜೀವನವೆಂದರೆ ಅಖಂಡ ಹೋರಾಟ. ಅವರಿಗೆ ಲಭಿಸುವದು ಅಸಹ್ಯ ಸಂಕಷ್ಟಗಳು. ಈ ಬೇಟೆಗಾರಿಕೆಗೆ ಬಡತನವು ಮೀರಲಾರದ ಮೇರೆ. ಹೀಗಿದ್ದರೂ ಕೂಡ ಅವರು ಸುಖ ಸಂತೋಷದಲ್ಲಿಯೇ ಇರುವದನ್ನು ನೋಡಿದರೆ ಸುಸಂಸ್ಕೃತರೂ ದಂಗು ಬಡೆದಿರಬೇಕು. ಆದರಾತಿಥ್ಯದಲ್ಲಿ ಜಗತ್ತಿನಲ್ಲಿಯೇ ಇವರಂಥ ಜನಾಂಗ ನಮಗೆ ಸಿಗದು. ಕೆಲವರು ತಮ್ಮ ಹೆಂಡತಿಯನ್ನು ಅತಿಥಿಗೆ ಅರ್ಪಿಸುವ ವರೆಗೂ ಮುಟ್ಟುತ್ತಾರೆ. ಈ ಅತಿರೇಕ ಮಟ್ಟದ ಮನರಂಜನೆಯಾರಾಧನೆಗೂ ಅವರು ಸಂತೋಷಪಟ್ಟುಕೊಳ್ಳುವರು. ದಯಮಾಡಿಟ್ಟು ನಾಳೆಯೇ ಎಸ್ಕಿಮೋಗಳ ಅತಿಥಿಯಾಗಲು ಹಾತೊರೆಯಬೇಡಿ. ಸಭ್ಯಗೃಹಸ್ಥರಲ್ಲವೆ ನೀವು ?

೭ ಲ್ಯಾಪ ಜನಾಂಗ

ಲ್ಯಾಪ್ ಜನಾಂಗದ ಜನರು ಹುಲ್ಲು ಮೇಯಿಸುತ್ತ ದನ ಗಾಹಿ ಉದ್ಯೋಗವನ್ನು ದೊಡ್ಡ ಪ್ರಮಾಣದಲ್ಲಿ ಮಾಡುತ್ತಾರೆ. ಇವರೂ ಕೂಡ ಸಂಚಾರಿಗಳೇ. ಇವರಿಗೆ ರೇನ್‌ಡಿಯರ್ ಪಾಲಕ ರೆಂದೆನ್ನಬಹುದು. ಈ ಅರ್ಥದಲ್ಲಿ ಎಸ್ಕಿಮೋಗಳಿಗಿಂತ ಮುಂದಿನ ಹಂತದಲ್ಲಿದ್ದಾರೆ. ಕೆಲವರು ಮೀನುಗಾರಿಕೆಯನ್ನು ಆರಿಸಿಕೊಂಡಿದ್ದಾರೆ. ಮತ್ತು ಸ್ಥಿರವಾಗಿ ಒಂದು ಕಡೆಗೆ ಇರಲು ಕಲಿತುಕೊಂಡಿದ್ದಾರೆ. ಆದುದರಿಂದ ಲ್ಯಾಪರು ಎಸ್ಕಿಮೋಗಳಿ ಗಿಂತ ಉತ್ತಮ ಸ್ಥಿತಿಯಲ್ಲಿದ್ದಾರೆ. ಮೊದಲು ಮೀನು ಹಿಡಿ ಯುವ ಮತ್ತು ಬೇಟೆಯಾಡುವ ಜನರಾದ ಇವರು ಈಗ ರೇನ್‌ಡಿ ಯರ್ ಪ್ರಾಣಿಗಳನ್ನು ಸಾಕಿ ಅವುಗಳ ಸಂಖ್ಯೆಯನ್ನು ಬೆಳೆಸಿ ದ್ದಾರೆ. ಇದೇ ಅವರ ಸ್ವತ್ತು, ಸಂಪತ್ತು. ಆದ್ದರಿಂದಲೇ ರೇನ್‌ಡಿಯರ್‌ಗಳ ಬೆನ್ನುಹತ್ತಿ ಸದಾಕಾಲವೂ ಸಂಚಾರ ಮಾಡ ಬೇಕಾಗುವದು.

ನಾರ್ವೆ, ಸ್ವೀಡನ್, ಫಿನ್‌ಲಂಡ ಮತ್ತು ರಶಿಯದ ಆಗ್ನೇಯ ಭಾಗದಲ್ಲಿ ಇತರ ಲ್ಯಾಪಗಳಿದ್ದಾರೆ. ಒಂದು ಸಂಸಾರಕ್ಕೆ ಸುಮಾರು

೨೦೦-೪೦೦ ವರೆಗೆ ರೇನ್‌ಡಿಯರ್ ಹಿಂಡು ಸಾಕಿರುವರು. ಮತ್ತು ಸುಮಾರು ೪೦ರಿಂದ ೬೦ ರೇನ್‌ಡಿಯರ್‌ಗಳನ್ನು ಆಹಾರ ಮತ್ತು ತೊಗಲುಗಳಿಗಾಗಿ ಕೊಂದು ತಿನ್ನುವರು. ಇವರ ಜೀವನ ಸದಾ ತಿರುಗುವದಾದ್ದರಿಂದ ಹೆಚ್ಚಾಗಿ ಸ್ವಾವಲಂಬಿಗಳಾಗಿ ರುತ್ತಾರೆ. ಕ್ರೂರಪ್ರಾಣಿಗಳ ಮಧ್ಯದಲ್ಲಿ ಹೋರಾಡುವಂಥ ಕಠಿಣ ವಾದ ಜೀವನ ಸಾಗಿಸುವರು. ಚಳಿಗಾಲದಲ್ಲಿ ಹಾವಸೆ ದೊರೆ ಯುವದರಿಂದ ಪರ್ವತ ಪ್ರದೇಶಕ್ಕೆ ಹೋಗುತ್ತಾರೆ. ಬೇಸಿಗೆಯ ಆರಂಭಕ್ಕೆ ರೇನ್‌ಡಿಯರ್‌ಗಳ ಹಿಂಡನ್ನು ಕರಾವಳೀ ಪ್ರದೇಶದತ್ತ ಹೊಡೆದುಕೊಂಡು ಬರುತ್ತಾರೆ. ಆಗ ಇಲ್ಲಿ ಮೇಯಿಸಲು ಒಳ್ಳೆಯ ಪರಿಸ್ಥಿತಿಯಿರುತ್ತದೆ.

ಮರುಭೂಮಿಯ ಜನರಿಗೆ ಒಂಟೆಯು ಹೇಗೆ ಉಪಯು ಕ್ತವೋ ಹಾಗೆ ಲ್ಯಾಪರಿಗೆ ಈ ರೇನ್‌ಡಿಯರ್. ರೇನ್‌ಡಿಯರ್ ದಿಂದ ಮಾಡದ ವಸ್ತುಗಳೇ ಇಲ್ಲವೆಂದು ಹೇಳಬಹುದು. ಅದೇ ಅವರ ಪಾಲಿನ ಕಾಮಧೇನು.

೮ ಭೂಮಧ್ಯ ಸಾಮುದ್ರಿಕ ಪ್ರದೇಶದ ಜೀವನ

ಇಲ್ಲಿಯು ವರೆಗೆ ಉದಹರಿಸಿದ ಪ್ರಸಂಗಗಳಲ್ಲಿ ಪರಿಸರದ ಪ್ರಭಾವ ಮಾನವನ ಜೀವನ ರೀತಿಯುನ್ನು ನಿರ್ಧರಿಸುತ್ತಿದ್ದರೆ, ಇಲ್ಲಿ ಮಾತ್ರ ಮಾನವನೇ ಮಹತ್ವ ಪಡೆದಿದ್ದಾನೆ. ಮುಂದು ವರಿದ ಅನೇಕ ಸುಸಂಸ್ಕೃತ ಜನಾಂಗಗಳು ಇಲ್ಲಿ ಒಟ್ಟಾಗಿವೆ. ಜಗತ್ತಿನ ಪ್ರಮುಖ ಶಕ್ತಿಗಳು ಈ ಪ್ರದೇಶದಲ್ಲಿ ಕೂಡಿವೆ. ಮಾನ ವನು ಪರಿಸರದ ಸವಾಲಿಗೆ ಯುಶಸ್ವಿಯಾದ ಪ್ರತಿಕ್ರಿಯೆಯಿಂದ ಉತ್ತರ ಕೊಟ್ಟಿದ್ದಾನೆ.

ಇಲ್ಲಿ ಮನುಷ್ಯನ ಪ್ರಭಾವ ಎದ್ದು ಕಾಣುತ್ತದೆ. ಈ ಪ್ರದೇಶವನ್ನು ಪ್ರೀತಿಸಿ ಬದುಕಿದ್ದಲ್ಲದೆ ಜೀವತೆತ್ತು ಹೋರಾಡಿದ ಇತಿಹಾಸವು ರೋಮಾಂಚನಕಾರಿಯಾಗಿದೆ.

ಭೂಮಧ್ಯ ಸಾಮುದ್ರಿಕ ಪ್ರದೇಶಗಳು :

ಕ್ಯಾಲಿಫೋರ್ನಿಯಾ
ಸ್ಪೇನ್
ಇಟಲಿ
ಪೋರ್ತುಗಾಲ
ಗ್ರೀಸ್

ಪರಿಸರದ ವೈಶಿಷ್ಟ್ಯಗಳು: ವೃಷ್ಟಿ ವಿತರಣೆಯು ವೈಶಿಷ್ಟ್ಯಪೂರ್ಣವಾಗಿರುವುದು. ಇದು ೩೦°–೪೦° ಉತ್ತರ ಮತ್ತು ದಕ್ಷಿಣ ಅಕ್ಷಾಂಶಗಳಲ್ಲಿ ಪಸರಿಸಿದ್ದು ಪಶ್ಚಿಮ ಕರಾವಳಿಗೆ ಸೀಮಿತವಾಗಿದೆ ಎಂದೆನ್ನಬಹುದು. ಕರಾವಳಿ ಪ್ರದೇಶಗಳು ತಂಪು ಪ್ರವಾಹಗಳ ಪ್ರಭಾವದಿಂದಾಗಿ ಬೇಸಿಗೆಯ ಉಷ್ಣತೆಯು ತಮ್ಮ ಅಕ್ಷಾಂಶಗಳಲ್ಲಿರಬಹುದಾದ ಉಷ್ಣತೆಗಿಂತ ತೀರ ಹೆಚ್ಚಾಗಿರುವದಿಲ್ಲ. ಚಳಿಗಾಲವು ಬೆಚ್ಚಗಾಗಿರುವದು. ಒಳಪ್ರದೇಶದಲ್ಲಿ ಮಾಸದ ಸರಾಸರಿ ಉಷ್ಣತೆಯು ಬೇಸಿಗೆಯಲ್ಲಿ ಬೇಗನೆ ಹೆಚ್ಚಾದರೂ ಚಳಿಗಾಲದಲ್ಲಿ ಕರಾವಳಿಗಿಂತ ತಂಪಾಗಿರುವದು. ಸಾಧಾರಣವಾಗಿ ರುಕ್ಷ ಪ್ರದೇಶಗಳಂತೆ ಮಳೆ ಕಡಿಮೆ. ಆದರೆ ಅದು ಬೀಳುವದು–ಚಳಿಗಾಲದಲ್ಲಿಯಾದ್ದರಿಂದ ಬಾಷ್ಪೀಭವನ ಹೊಂದುವದು ಕಡಿಮೆಯಾಗಿ ಹೆಚ್ಚು ಭಾಗ ಜಮೀನಿಗೆ ಸೇರುತ್ತದೆ. ಅರ್ಥಾತ್ ಬೇಸಿಗೆ ಪೂರ್ತಿ ಒಣದಾಗಿದ್ದು ಸೂರ್ಯಪ್ರಕಾಶ ಯಥೇಚ್ಛವಾಗಿರುವದು.

ಒಕ್ಕಲುತನದ ರೀತಿ: ಬೇಸಿಗೆಯನ್ನು ತಡೆದುಕೊಳ್ಳುವ ಶಕ್ತಿಯನ್ನು ಬೆಳೆಸಿಕೊಂಡು ವೃದ್ಧಿಕಾಲದಲ್ಲಿ ನಿರಾರ್ದ್ರ ಪರಿಸ್ಥಿತಿಯನ್ನು ಮೆಟ್ಟಿನಿಲ್ಲುವ ಬೆಳೆಗಳನ್ನು ಮಾತ್ರ ತೆಗೆಯಬಹುದಾಗಿದೆ. ನೀರಾವರಿ ಸೌಲಭ್ಯ ಹೊಂದಿದಲ್ಲಿ ಇನ್ನಿತರ ಬೆಳೆ ಬೇಸಾಯವನ್ನೂ ಮಾಡುವರು.

ಚಳಿಗಾಲದಲ್ಲಿ ಬೀಳುವ ಮಳೆ ಬಹಳ ಪರಿಣಾಮಕಾರಿಯಾಗಿರುವದು. ಇದು ಇನ್ನೊಂದು ನಿಸರ್ಗದ ದೇಣಿಗೆ. ಮಳೆಯನೀರು ಹೆಚ್ಚು ಭೂಮಿಗೆ ಸೇರುವದರಿಂದ ಹೆಚ್ಚು ಆಳದವರೆಗೆ ಹೋಗುವ

ಬೇರುಗಳುಳ್ಳ ಗಿಡಗಳಿಗೆ ಮಾತ್ರ ದೊರಕುವದು ಸಾಧ್ಯ. ಆದ್ದರಿಂದ ಪರಿಸರವು ವೃಕ್ಷ ಮತ್ತು ಬಳ್ಳಿ ಜಾತಿಯ ಬೆಳೆಗಳಿಗೆ ಸಹಕಾರಿಯಾಗಿದೆ. ರುಕ್ಷ ಪರಿಸ್ಥಿತಿಯಲ್ಲಿ ಒಳ್ಳೆಯ ಚೆನ್ನಾಗಿ ಬೆಳೆಯುವ ಸಸ್ಯವೆಂದರೆ ಹುಲ್ಲು. ನಿರ್ಜೀವವಾಗಿರುವ ಒಣ ಹುಲ್ಲು ಕೂಡ ದನಗಳಿಗೆ ಮೇವು ಪೂರೈಸಬಲ್ಲವು. ಸ್ವಲ್ಪ ಮಳೆ ಬಿದ್ದಾಗ ಕೂಡ ಮತ್ತೆ ಚಿಗಿತು ಸಜೀವವಾಗುವದು.

ಸೌಮ್ಯ ಚಳಿಗಾಲವು ಬೇಸಾಯಗಾರರಿಗೆ ಇನ್ನೊಂದು ಮಹತ್ವದ ಅಂಶ. ಹಲವು ಸ್ಥಳಗಳಲ್ಲಿ ತೀರ ತಂಪಾದ ಎರಡು ತಿಂಗಳುಗಳಲ್ಲಿ ದಟ್ಟವಾದ ಮಂಜು ಬಿದ್ದು ವರ್ಷದಲ್ಲಿ ೨೦೦ ದಿನದ ಸಸ್ಯವೃದ್ಧಿಕಾಲ ಒದಗುತ್ತದೆ. ಇದರಿಂದಾಗಿ ನಿಂಬೆ ಜಾತಿಯ ಉಪವೃತ್ತೀಯ ಜಾತಿಯ ಸಸ್ಯಗಳನ್ನು ಬೆಳೆಯಲು ಶಕ್ಯವಾಗುವದು. ಇವುಗಳಿಗೆ ಬಹಳ ಬೇಡಿಕೆಯೂ ಇದೆ. ಆದರೆ ದಟ್ಟವಾದ ಮಂಜು ಮಾತ್ರ ಇಂಥ ಗಿಡಗಳಿಗೆ ಮಾರಕ ಪ್ರಾಯವಾಗಿರುವದೊಂದು ಸಮಸ್ಯೆ. ಅದರಂತೆ ದೊಡ್ಡ ಪ್ರಮಾಣದಲ್ಲಿ ತರಕಾರಿ ಬೆಳೆಯುವದಕ್ಕೂ ಪರಿಸರ ಬಹಳ ಅನುಕೂಲವಾಗಿದೆ. ಬೇಸಾಯಗಾರನು ಕೆಳಗಿನಂತೆ ಬೆಳೆಗಳ ಆಯ್ಕೆ ಮಾಡುತ್ತಾನೆ.

೧) ಚಳಿಗಾಲದ ಗೋಧಿ, ಬಾರ್ಲಿ ಅಥವಾ ಕಾಳು

೨) ಯಾವದಾದರೊಂದು ನೀರಾವರಿ ಬೆಳೆ– ಹಣ್ಣು– ತರಕಾರಿ, ಮೇವಿನ ಬೆಳೆ ಅಥವಾ

೩) ಗಿಡಬಳ್ಳಿ ತೋಟ

೪) ದನದ ಸಾಕುವಿಕೆ– ದನ, ಕುರಿ, ಆಡು ಇತ್ಯಾದಿ–

ಆಲಿವ್‌ತೋಟ, ದ್ರಾಕ್ಷಿ ತೋಟಗಾರಿಕೆ, ಸಿಟ್ರಸ್ ಜಾತಿಯ (ನಿಂಬೆ ಇದ್ದಾಗ) ಹಣ್ಣುಗಳು ಮುಖ್ಯವಾದ ಉತ್ಪಾದನೆಗಳು. ನಿಸರ್ಗವು ಮಾನವನಿಗೆ ಕೃಪೆ ತೋರಿದ ಕೆಲವು ಪ್ರದೇಶಗಳಲ್ಲಿ ಇದೂ ಒಂದಾಗಿದೆ. ಆದ್ದರಿಂದ ಉದ್ದಿಮೆ ಕೇಂದ್ರಗಳು ಮತ್ತು ನಗರ ಜೀವನವೂ ಊರ್ಜಿತ ಸ್ಥಿತಿಯಲ್ಲಿದೆ. ಮುಂದುವರೆದ ಅನೇಕ ಸುಸಂಸ್ಕೃತ ಜನಾಂಗಗಳು ಇಲ್ಲಿ ಒಟ್ಟಾಗಿವೆ. ನವೀನ ವೈಜ್ಞಾನಿಕ ಸಂಶೋಧನೆಗಳೂ, ತಾಂತ್ರಿಕ ಮತ್ತು ಯಾಂತ್ರಿಕ ಪ್ರಗತಿಯಿಂದಾಗಿ ಜಗತ್ತಿನ ಪ್ರಬಲ ಶಕ್ತಿಗಳು ಇಲ್ಲಿ ಕೂಡುವಂತಾಗಿವೆ. ಮಾನವನು ನಿಸರ್ಗದ ಸವಾಲುಗಳಿಗೆ ಯಶಸ್ವಿಯಾಗಿ ಉತ್ತರಿಸಿದ್ದಾನೆ. ಈ ಅರ್ಥದಲ್ಲಿ ಪರಿಸರದಿಂದ ಪಡೆಯಬಹುದಾದುದೆಲ್ಲವನ್ನೂ ಪಡೆದುಕೊಂಡಿದ್ದಾನೆ.

ಮರುಭೂಮಿಯಲ್ಲಿಯ ಪರಿಸರ ಮತ್ತು ಜೀವನ:

ಆರ್ದ್ರತೆಯ ಅಭಾವ ಇರುವಲ್ಲಿ ಕುರಕಲು, ಎಲ್ಲಿಯೋ ಒಂದೊಂದು ಕಂಟಿ ಅಥವಾ ಗಿಡ್ಡ ಹುಲ್ಲು ಕಂಡುಬರುವ ಸಸ್ಯ.

ಪ್ರಪಂಚದ ಮೂರು ಧರ್ಮಗಳು ಜನ್ಮ ತಳೆದದ್ದು ನಿರ್ಜಲ ಮರುಭೂಮಿಗಳಲ್ಲಿ ಎಂದು ಹೆಸರಾಗಿದೆ. ಸಾಕಷ್ಟು ನೀರು ದೊರಕದ ಪ್ರದೇಶದ ಜೀವನ ಕಲ್ಪನೆಗೆ ಕೂಡ ನಿಲುಕದಂಥ ವಿಚಾರವಾಗಿದೆ.

ಮರುಭೂಮಿಯ ಜನಾಂಗಗಳ ಬಗ್ಗೆಯೂ ಭೀತಿ ಸಾಕಷ್ಟು ಕಂಡುಬಂದಿದೆ. ಮರುಭೂಮಿಯ ಜನರಿಂದ ಆಕ್ರಮಣ ನಡೆದ ಉದಾಹರಣೆಗಳು ಇತಿಹಾಸದಲ್ಲಿವೆ. ಅರಬರು

ಮಂಗೋಲರು ದಾಳಿ ಮಾಡುವದರಲ್ಲಿ ಬಹಳ ಪ್ರಸಿದ್ಧಿ ಪಡೆದಿದ್ದಾರೆ.

ಈಗಲೂ ಕೂಡ ಮರುಭೂಮಿ ಪಳಗಿಸುವುದನ್ನು ಕೊನೆಯ ಹಂತದಲ್ಲಿ ಮಾತ್ರ ಕೈಕೊಳ್ಳುವರು.

ಆಫ್ರಿಕೆಯ ಬುಶ್‌ಮೆನ್‌ರು : ಕಲಹಾರಿ ಮರು ಭೂಮಿಯು ಇವರ ವಾಸಸ್ಥಳ. ಉನ್ನತ ಪರ್ವತಗಳು ಸುತ್ತು ವರಿದ ಪೀಠಭೂಮಿಯು ಇವರಿಗೆ ರಕ್ಷಣೆ ಒದಗಿಸಿವೆ. ಇವರು ಜೀವನದಲ್ಲಿ ಕೂಡ ಸದಾ ಆಹಾರ ನೀರುಗಳ ಶೋಧನೆಯಲ್ಲಿಯೇ ಕಳೆಯುತ್ತಾರೆ. ಸಸ್ಯಾಹಾರದ ಕೊರತೆಯಿಂದಾಗಿ ಪ್ರಾಣಿಗಳ ಮೇಲೆ ಅವಲಂಬಿಸುವರು. ಬೇಸಿಗೆಯಲ್ಲಿ ಪ್ರಾಣಿಗಳು ನೀರು ಸಿಗುವಲ್ಲಿಗೆ ಪಯಣಿಸುತ್ತವೆ. ಆದ್ದರಿಂದ ಬೇಟೆಯಾಡುವವರು ದೀರ್ಘಕಾಲದ ವರೆಗೆ ಪ್ರಾಣಿಗಳನ್ನರಸುತ್ತ ಹೋಗಬೇಕಾಗು ವದು. ಬೇಟೆಯು ತಪ್ಪಿಸಿಕೊಳ್ಳಬಾರದೆಂದು ವಿಷಾರಿ ಬಾಣ ಗಳಿಂದ ಬೇಟೆಯಾಡುವದು ಇವರ ವೈಶಿಷ್ಟ್ಯ. ಪ್ರಾಣಿಗಳು ಹೇರಳವಾಗಿರದ್ದರಿಂದ ಈ ಜನರು ಅತಿ ಸೂಕ್ಷ್ಮಬುದ್ಧಿ ಚಾಲನೆ ಯಿಂದ ಅವುಗಳನ್ನು ಬೆನ್ನಟ್ಟುವರು. ಅವರ ಶೋಧಕ ಮತ್ತು ನೆನಪಿನ ಶಕ್ತಿಗಳು ಬಹಳ ಹರಿತವಾಗಿರುವವು. ನಮ್ಮ ಹಿತ್ತಲದ ಪರಿಚಯ ನಮಗಿದ್ದಹಾಗೆ ಸಾವಿರಾರು ಚೌರಸ ಮೈಲು ಪ್ರದೇಶ ಗಳನ್ನು ಅವರು ತಿಳಿದಿರುತ್ತಾರೆ.

ಬೇಸಿಗೆಯಲ್ಲಿ ಕಲ್ಲಂಗಡಿ, ಬಿ ಮತ್ತು ಗಾ ಎಂಬ ಹೆಸರಿನ ಸಸ್ಯಗಳನ್ನು ಬೆಳೆಸುವರು. ಇವುಗಳಿಂದ ನೀರು ಆಹಾರ ಗಳನ್ನವರು ಪಡೆಯುವರು. ಅಸ್ಥಿಚರ್ಮಗಳ ಕವಚಗಳಲ್ಲಿ

ನೀರನ್ನು ಸಂಗ್ರಹಿಸುವುದೂ ಒಂದು ವಿಶಿಷ್ಟ ಪದ್ಧತಿ. ಬೀಜ, ಪರಗಿ, ಕುಂಬಳ ಜಾತಿಯ ಹಣ್ಣು ಅಲ್ಲದೆ ಹುಳು ಹುಪ್ಪಡಿಗಳೂ ಅವರ ಇನ್ನಿತರ ಆಹಾರಪದಾರ್ಥಗಳಾಗಿರುವವು. ಹಾರುವ ಇರುವೆಗಳು ಬಹು ಸ್ವಾದಿಷ್ಟ ಆಹಾರವೆಂದರೆ ನಮಗೆ ಅಸಹ್ಯ ಹಾಗೂ ಜುಗುಪ್ಸೆ ಆಗುವದಲ್ಲವೇ ? ಆದರೆ ಆ ಜೀವನ ಅಷ್ಟು ಕಠಿಣವಾದುದು.

ಸಾಮಾಜಿಕ ಸಂಸ್ಥೆಗಳು ಕಾಡು ರೀತಿಯವಾಗಿವೆ. ಅವರ ಗುಡಿಸಲುಗಳ ಗುಂಪಿಗೆ ವರ್ಷ ಎನ್ನುವದುಂಟು. ಪ್ರಾಣಿಯ ತೊಗಲೇ ಅವರ ಅರಿವೆ ಅಂಚಡಿಗಳು. ಇವರ ಮೂಲ ಸಂಸ್ಕೃತಿಯು ಸುಸಂಸ್ಕೃತ ಜನರ ಸಂಪರ್ಕದಿಂದಾಗಿ ಕಡಿಮೆಯಾಗುತ್ತಲಿದೆ. ಆಸ್ಟ್ರೇಲಿಯಾದ ಮೂಲನಿವಾಸಿಗಳು ಇವರಂತೆ ಜೀವನಕ್ರಮವುಳ್ಳವರಾಗಿದ್ದಾರೆ.

ಇದೇ ಪರಿಸರದಲ್ಲಿ ಪ್ರಾಣಿಗಳನ್ನು ಸಾಕಿ ಅವುಗಳ ಉತ್ಪತ್ತಿಯ ಮೇಲೆ ಜೀವನ ಸಾಗಿಸುವವರೂ ಇದ್ದಾರೆ. ಇದು ಮೇಲೆ ಹೇಳಿದ ಅರ್ಥ ವ್ಯವಸ್ಥೆಗಿಂತಲೂ ಒಳ್ಳೆಯದಾಗಿದೆ. ದನ, ಕುರಿ, ಆಡುಗಳು ಪ್ರಥಮವಾಗಿ (ಏಶಿಯಾದಲ್ಲಿ) ಸಾಕು ಪ್ರಾಣಿಗಳೆಂದೆನಿಸಿದವು. ಮಧ್ಯ ಏಶಿಯಾದಲ್ಲಿ ಕುದುರೆ, ಯಾಕ್ ಮತ್ತು ಒಂಟೆಗಳನ್ನು ಸಾಕುವ ಜನಾಂಗಗಳಿವೆ. ಇಂಥ ಅರ್ಥ ವ್ಯವಸ್ಥೆಯಲ್ಲಿರುವ ಜನಾಂಗಕ್ಕೆ ಸಂಚಾರಿ ಜೀವನ ಅವಶ್ಯಕವಾಗಿರುವದು. ಇತ್ತೀಚೆಗೆ ಈ ಪದ್ಧತಿ ಕಡಿಮೆಯಾಗುತ್ತಿದೆ.

ಭಕ್ತ್ಯಾರಿ, ಲೂರ್, ಕುರ್ದ, ಕಸಘಾಯಿ ತುರ್ಕಮೆನ್ ಜನಾಂಗಗಳು ಈ ಜೀವನ ಕ್ರಮ ನಡೆಸುತ್ತವೆ. ರುವಾಲಾ

ಬೆಡೌನ್– ಅರೇಬಿಯನ್ ಭೂಶಿರದಲ್ಲಿಯೇ ವಾಸಿಸುವ ಒಂದು ಸಂಚಾರಿ ಜನಾಂಗ ಮಧ್ಯ ಸಿರಿಯಾ, ಜೋರ್ಡಾನ್ ಮತ್ತು ಇರಾಕ್‌ದಿಂದ ಸೌದೀ ಅರೇಬಿಯಾದ ವರೆಗೆ ಕಂಡು ಬರುವದು. ಇವರ ಸಾಮಾಜಿಕ ಜೀವನ ಕ್ಲಿಷ್ಟವಾದುದಾಗಿದೆ. ತಮ್ಮ ಪ್ರಾಣಿಗಳ ಹಿಂಡು ಇವರ ಜೀವನದಲ್ಲಿ ಕೇಂದ್ರ ಸ್ಥಾನ ಪಡೆಯುತ್ತದೆ. ಒಂಟೆಯು ಆಹಾರ, ನೀರು, ಆರಿವೆ, ಉರುವಲು ಮತ್ತು ಇನ್ನಿತರ ಸಲಕರಣೆಗಳನ್ನು ಒದಗಿಸುತ್ತದೆ.

ಇನ್ನು ಮುಂದೆ ಪರಿಸರವು, ಸಾಮಾನ್ಯವಾಗಿ, ಮಾನವ ಜೀವನಕ್ಕೆ ಅನುಕೂಲವಿರುವ ಒಂದು ಪ್ರದೇಶವನ್ನು ಚರ್ಚಿಸಲಾಗುವದು. ಎರಡನೆಯದಾಗಿ, ನಮ್ಮ ಸುತ್ತುಮುತ್ತಲಿನ ಪರಿಸರ ತಿಳಿಯುವದು ಅಷ್ಟೇ ಮಹತ್ವದ್ದಾಗಿದೆ. ಆದಕಾರಣ ಮಾನ್ಸೂನ ಪ್ರದೇಶದಲ್ಲಿ ಬರುವ ನಮ್ಮ ಭಾರತ ಮತ್ತು ಕರ್ನಾಟಕದ ವೈಶಿಷ್ಟ್ಯಗಳನ್ನು ಗುರುತಿಸಲಾಗಿದೆ.

ಮಾನ್ಸೂನ ಪ್ರದೇಶದ ವೈಶಿಷ್ಟ್ಯಗಳು

ಮಾನ್ಸೂನ್ ಪ್ರದೇಶವು ವಿಶೇಷ ನಮೂನೆಯ ಆರ್ದ್ರ–ಋಕ್ಷ ಹವಾಮಾನ ಅನುಭವಿಸುವದು. ಮಾನ್ಸೂನ್ ಎಂಬುದೊಂದು ಅರಬ್ಬಿ ಭಾಷೆಯ ಶಬ್ದ ನಿಜವಾದರೂ ಮಾನ್ಸೂನ್ ಪ್ರದೇಶದ ಜನರು ಅದೊಂದು ಮಳೆಯನ್ನು ಹೊತ್ತು ತರುವ ಋತುಬದ್ಧವಾದ ಮಾರುತವೆಂದೇ ತಿಳಿಯುವರು. ಋತು ಬದಲಾವಣೆಯೊಂದಿಗೆ, ಒತ್ತಡ ಪ್ರದೇಶಗಳು ಮತ್ತು ಮಾರುತ ಸರಣಿ ಸಂಪೂರ್ಣ ಅದಲುಬದಲಾಗುವದು, ಈ ಪ್ರದೇಶದ ಹವಾಮಾನದ ವೈಶಿಷ್ಟ್ಯ.

ಮನ್ಸೂನ್ ಗಾಳಿಗಳ ಉತ್ಪತ್ತಿ ವಿಧಾನ

ಭೂಮಿಯು ಉಷ್ಣತೆಯನ್ನು ಪಡೆಯುವಲ್ಲಿಯೂ, ಕಳೆದುಕೊಳ್ಳುವಲ್ಲಿಯೂ ಶೀಘ್ರತೆಯನ್ನು ಹೊಂದಿದೆ. ಆದರೆ ನೀರು ಸಾವಕಾಶ ಕಾಯ್ದು ಸಾವಕಾಶವಾಗಿ ಆರುವದು. ಈ ರೀತಿಯ ಭೂ ಮತ್ತು ಜಲದ ಕಾಯುವದರಲ್ಲಿಯ ವ್ಯತ್ಯಾಸವೇ ಮನ್ಸೂನ ಉತ್ಪತ್ತಿಗೆ ಮೂಲ ಪ್ರೇರಕ ಶಕ್ತಿಯಾಗಿದೆ, ಆಧಾರವಾಗಿದೆ. ಮನ್ಸೂನವು ವಿಧಾನದಲ್ಲಿ ಭೂಮಿ ಮತ್ತು ಜಲ ಭಾಗಗಳಂತೆ ಕಂಡು ಬರುವದು. ಆದರೆ ಭೂ ಮತ್ತು ಜಲ ಗಾಳಿಗಳು ಪ್ರತಿದಿನವೂ ಉಂಟಾದರೆ ಮನ್ಸೂನ್ ಗಾಳಿಗಳು ಋತುಗಳಿಗೆ ಅನುಗುಣವಾಗಿ ಉಂಟಾಗುವದಲ್ಲದೆ ಖಂಡಗಾತ್ರದಲ್ಲಿ ಕಂಡುಬರುವವು.

ಪೂರ್ವಪಶ್ಚಿಮವಾಗಿ ಹಬ್ಬಿರುವ ಭೂ ಭಾಗ, ದಕ್ಷಿಣಕ್ಕೆ ವಿಶಾಲವಾದ ಹಿಂದೂ ಮಹಾಸಾಗರದ ಸನ್ನಿವೇಶದಿಂದಾಗಿ ದಕ್ಷಿಣ ಏಶಿಯಾದಲ್ಲಿ ಮನ್ಸೂನ್ ಮಾರುತಗಳು ಬಹಳ ಮಹತ್ವ ಪಡೆದಿವೆ.

ಏಶಿಯಾದ ಭಾಗದಲ್ಲಿ ಬೇಸಿಗೆಯ ಮತ್ತು ಚಳಿಗಾಲದ ಮನ್ಸೂನ ಎಂಬ ಎರಡು ಮನ್ಸೂನಗಳಿವೆ. ಬೇಸಿಗೆಯಲ್ಲಿ ಹಿಂದೂ ಮಹಾಸಾಗರದ ಮೇಲಿನ ಹೆಚ್ಚು ಒತ್ತಡ ಪ್ರದೇಶದಿಂದ ಪಂಜಾಬದ ಕಡಿಮೆ ಒತ್ತಡ ಪ್ರದೇಶದ ಕಡೆಗೆ ಏಕಪ್ರಕಾರವಾಗಿ ಬೀಸುವವು. ಈ ಉಷ್ಣ ನೀರಿಗಾಗಿ ಹಸಿದ ಗಾಳಿಗಳು ಸಾಗರದ ಮೇಲೆ ಹಾಯುವಾಗ ಸಮೃದ್ಧವಾಗಿ ನೀರಿನ ಉಗಿಯನ್ನು ಹೊತ್ತು ತರುವವು. ಇವೇ ಮನ್ಸೂನ

ಗಳು ಏಶಿಯಾದ ಪ್ರಮುಖ ಪ್ರಭಾವ ಬೀರುವ ಪರಿಸರದ ಅಂಶವಾಗಿ ಪರಿಣಮಿಸಿವೆ. ಇದು ಸಾಮಾನ್ಯವಾಗಿ ಮಾನ್ಸೂನ್ ಪ್ರದೇಶಗಳ ಜೀವಪೂರಕ ಶಕ್ತಿ. ಈ ಗಾಳಿಗಳು ಮಧ್ಯದ ಗುಡ್ಡ ಪರ್ವತಗಳಿಂದ ತಡೆಯಲ್ಪಟ್ಟಾಗ ಮಳೆ ಬೀಳುವದು. ಇದಕ್ಕೆ ನೈರುತ್ಯ ಮಾನ್ಸೂನ್ ಎಂದು ನಾಮಕರಿಸಿದ್ದಾರೆ.

ಚಳಿಗಾಲದಲ್ಲಿ ಪರಿಸ್ಥಿತಿಯು ತಿರುವು ಮುರುವಾಗುತ್ತದೆ. ಭೂಭಾಗ ಹೆಚ್ಚು ಒತ್ತಡ ಪ್ರದೇಶವಾಗಿ, ಜಲಭಾಗವು ಕಡಿಮೆ ಒತ್ತಡ ಪ್ರದೇಶವಾಗಿ ಪರಿಣಮಿಸುವದು. ಇದರ ದಿಕ್ಕು ಸಾಮಾನ್ಯವಾಗಿ ಉತ್ತರ ಪೂರ್ವ ಇರುವದರಿಂದಾಗಿ ಈಶಾನ್ಯ ಮಾನ್ಸೂನ್‌ಗಳೆಂದು ನಾಮಕರಣವಾಗಿದೆ. ಇವು ಭೂ ಜನಿತ ವಾಗಿರುವದರಿಂದ ಒಣದಾಗಿಯೂ, ತಂಪಾಗಿಯೂ ಇರುವದು. ಈ ಮಾನ್ಸೂನು ಕೂಡ ಸ್ವಲ್ಪ ಮಳೆ ಕೊಡುವದು. ಈಶಾನ್ಯ ಮಾನ್ಸೂನದಿಂದ ಸಿಲೋನ್, ಮದ್ರಾಸ ಕರಾವಳಿ ಮತ್ತು ಇಂಡೋಚೀನದ ಪೂರ್ವ ಕರಾವಳಿಗೆ ಮಳೆಯಾಗುವದು.

ಸುಮಾರು ೧೦° ಮತ್ತು ೨೦° ಅಕ್ಷಾಂಶ ಪಟ್ಟಿಯಲ್ಲಿಯ ಭಾರತ, ಸಿಲೋನ, ಬರ್ಮಾ, ಥಾಯಲಂಡ, ಕಂಬೋಡಿಯ, ಲಾವೋಸ್, ವಿಯಟ್‌ನಾಮ, ಚೀನದ ಪಶ್ಚಿಮ ಫಿಲಿಪಾಯಿನ್ಸ ಗಳನ್ನು ಒಳಗೊಳ್ಳುವದು.

ಹವಾಮಾನ:– ಒತ್ತಡ ವಿತರಣೆ ಮತ್ತು ಗಾಳಿಗಳು ಋತುಗಳಿಗನುಸಾರವಾಗಿ ತದ್ವಿರುದ್ಧ ಪರಿಸ್ಥಿತಿಯನ್ನು ತಳೆದು ಲಯಬದ್ಧವಾದ ಹವಾಮಾನ ಬದಲಾವಣೆಗೆ ಕಾರಣವಾಗು ವದು; ಮಾನ್ಸೂನ್ ಪ್ರದೇಶದ ವೈಶಿಷ್ಟ್ಯ. ಅದರಲ್ಲಿಯೂ

ಭಾರತವು ಇಂಥ ಪರಿಸರದ ಪ್ರಭಾವವನ್ನು ಉತ್ಕೃಷ್ಟವಾಗಿ ತೋರಿಸುವದು. ಬೇಸಿಗೆಯ ಮಾಸಿಕ ಸರಾಸರಿ ೨೫°–೨೭° ಸೆಂ. ಚಳಿಗಾಲದ ಮಾಸಿಕ ಸರಾಸರಿ ೧೫°-೨೪° ಸೆ. ದೈನಿಕ ಮತ್ತು ವಾರ್ಷಿಕ ಸರಾಸರಿ ಉಷ್ಣತಾಮಾನದಲ್ಲಿಯ ಅಂತರ ಹೆಚ್ಚಾಗಿರುವದು. ಬೇಸಿಗೆ ಮತ್ತು ಚಳಿಗಾಲದ ಮಧ್ಯಂತರ ಅವಧಿಗಳು ಅಸ್ಥಿರ ಪರಿಸ್ಥಿತಿಯಿಂದ ಕೂಡಿರುವವು. ಜನಸಾಂದ್ರತೆ ಅಧಿಕ.

ಉದ್ದಿಮೆಗಳು:— ಅಡವಿ ಉತ್ಪನ್ನಗಳನ್ನಾಧರಿಸಿದ ಉದ್ದಿಮೆಗಳು, ಹಾಳೆ ತಯಾರಿಕೆ, ಕಟ್ಟಿಗೆ ಕಡಿಯುವದು ಮುಂ. ಕಟ್ಟಿಗೆಯ ಸಲಕರಣೆ ತಯಾರಿಸುವ ಕೆಲಸಗಳಿಗೆ ಸಾಕಷ್ಟು ಅವಕಾಶವಿದೆ. ಒಕ್ಕಲುತನದ ಉತ್ಪತ್ತಿ ಆಧಾರಿತ ಉದ್ದಿಮೆಗಳಾದ ಹತ್ತಿಬಟ್ಟೆ ಉದ್ದಿಮೆ, ಸಕ್ಕರೆ ತಯಾರಿಕೆ, ಜೂಟ ನಾರಿನ ಉದ್ದಿಮೆ, ತಂಬಾಕದ ಉದ್ದಿಮೆಗಳು ಪ್ರಗತಿ ಸಾಧಿಸಿವೆ. ಇನ್ನೂ ಅವಕಾಶವೂ ಸಾಕಷ್ಟಿದೆ.

ಹೀಗೆ ಮಾನವನಿಗೆ ಬೇಕಾದ ಅನೇಕ ಸಂಪತ್ತು ಇದ್ದರೂ ಇವು ಮುಂದುವರಿದ ಪ್ರದೇಶಗಳಾಗಿಲ್ಲ. ಇದಕ್ಕೆ ಮುಖ್ಯ ಐತಿಹಾಸಿಕ ಕಾರಣಗಳಿವೆ– ಯುರೋಪಿಯನ್ನರು ಈ ಪ್ರದೇಶಗಳನ್ನು ಅಭಿವೃದ್ಧಿಪಡಿಸದೆ, ತಮ್ಮ ಲಾಭಕ್ಕಾಗಿ ಶೋಷಣೆ ನಡೆಸಿದರು. ಭಾರತದ ಮೊದಲಿನ ಇತಿಹಾಸವನ್ನು ಗಣನೆಗೆ ತೆಗೆದುಕೊಳ್ಳದೆ, ಬ್ರಿಟಿಶ್ ಆಳಿಕೆಯಿಂದ ಇತ್ತೀಚಿನ ವಿಚಾರ ಎತ್ತಿಕೊಂಡರೆ, ಬ್ರಿಟಿಶರ ಶೋಷಣೆಯಿಂದ ಬಡವಾದ ಭಾರತವನ್ನು ಸ್ವಾತಂತ್ರ್ಯ ನಂತರದ ಪ್ರಯತ್ನಗಳಿಂದ ಚೇತರಿಸುವಂತೆ

ಮಾಡಲಾಗಿದೆ. ಹೀಗೆ ಸುಸಂಸ್ಕೃತ ಅಥವಾ ಪ್ರಗತಿಗೊಂಡ ಪ್ರದೇಶಗಳಲ್ಲಿ ಪರಿಸರದ ಪ್ರಭಾವಗಳಲ್ಲದೆ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಗಳೂ ಪ್ರಭಾವ ಬೀರುತ್ತವೆ. ಇಂಥ ಸಂದರ್ಭಗಳಲ್ಲಿ ಭೌಗೋಲಿಕ ಪರಿಸರಕ್ಕೂ ಮಾನವ ಜೀವನಕ್ಕೂ ನೇರ ಅಥವಾ ಸರಳ ಸಂಬಂಧ ಗುರುತಿಸುವದು ಕಠಿಣ. ಪ್ರಗತಿ ಲಕ್ಷಣಗಳ ಬಗ್ಗೆ ವಿಶೇಷ ಗಮನ ಹರಿಸುವದು ಯೋಗ್ಯವಾಗುವದು. ಇಂತಹ ಪ್ರದೇಶಗಳ ವೈಶಿಷ್ಟ್ಯಗಳನ್ನು ಬಿಡಿಸಿ ತಿಳಿಸುವದಕ್ಕಾಗಿ ಭಾರತದ ಪರಿಸರ ಮತ್ತು ಮಾನವ ಜೀವನವನ್ನು ತಿಳಿಯುವಾ.

ಭಾರತ

ಸನ್ನಿವೇಶ:– ಭಾರತ ದಕ್ಷಿಣ ಏಶಿಯಾದ ದೊಡ್ಡ ದೇಶವಾಗಿದೆ. (ವಿಸ್ತೀರ್ಣ ೧೨,೬೨, ೨೭೫ ಚ. ಮೈಲು). (ಜನಸಂಖ್ಯೆ ೪೮೭ ದಶಲಕ್ಷ) ಪ್ರಪಂಚದ $\frac{1}{6}$ದಷ್ಟು ಜನಸಂಖ್ಯೆ ಇಲ್ಲಿದೆ. ಇದು ಮನ್ನೂನ ಪ್ರದೇಶದಲ್ಲಿಯ ಪುರಾತನ ಸಂಸ್ಕೃತಿ ಇತಿಹಾಸವುಳ್ಳ ನಾಡು. (೮° ೪′ ಉತ್ತರದಿಂದ ದಕ್ಷಿಣಕ್ಕೆ ೩೭°–೮′ ಅಕ್ಷಾಂಶ; ೬೮° ಪೂರ್ವದಿಂದ ೯೭°– ೫′ ಪೂರ್ವ ರೇಖಾಂಶ ವಿಸ್ತಾರ). ಉತ್ತರದಿಂದ ದಕ್ಷಿಣಕ್ಕೆ ಸುಮಾರು ೨೦೦೦ ಮೈಲು ಮತ್ತು ಪೂರ್ವ ಪಶ್ಚಿಮ ದಿಕ್ಕಿನಲ್ಲಿ ಅತ್ಯಧಿಕ ವಿಶಾಲ ಭಾಗವು ೧೮೫೦ ಮೈಲುಗಳಷ್ಟು ಅಗಲವಾಗಿದೆ. (೯೪೪೫ ಮೈಲು ಭೂ ಮೇರೆ, ೩೫೨೫ ಸಮುದ್ರ ತೀರದ ಮೇರೆ). ಪಶ್ಚಿಮಕ್ಕೆ ಅರಬ್ಬಿ ಸಮುದ್ರ, ದಕ್ಷಿಣಕ್ಕೆ ಹಿಂದೂಸಾಗರ ಮತ್ತು ಪೂರ್ವಕ್ಕೆ ಬಂಗಾಲ ಉಪಸಾಗರದಿಂದ ಆವೃತವಾಗಿರುವದರಿಂದ ಇದೊಂದು ಪರ್ಯಾಯ ದ್ವೀಪವಾಗಿದೆ.

ಪ್ರಾಕೃತಿಕ ವಿಭಾಗಗಳು :– ಭಾರತವನ್ನು ಮೇಲ್ಮೈ ಲಕ್ಷಣದ ವೈಶಿಷ್ಟ್ಯಗಳಿಗನುಗುಣವಾಗಿ, ೧) ಉತ್ತರದ ಹಿಮಾಲಯ ಪರ್ವತ ಶ್ರೇಣಿಗಳು, ೨) ಉತ್ತರ ಭಾರತದ ವಿಶಾಲವಾದ ಮೈದಾನು, ೩) ದಕ್ಷಿಣದ ಪೀಠಭೂಮಿ ಎಂದು ಮೂರು ಮುಖ್ಯ ವಿಭಾಗಗಳನ್ನು ಮಾಡಬಹುದು.

೧) ಉತ್ತರದ ಹಿಮಾಲಯ ಪರ್ವತ ಶ್ರೇಣಿಗಳು: ಉತ್ತರದ ಹಿಮಾಲಯ ಪರ್ವತ ಶ್ರೇಣಿಗಳಲ್ಲಿ ಮೂರು ಮುಖ್ಯ ಶ್ರೇಣಿಗಳನ್ನು ಗುರುತಿಸಲಾಗಿದೆ. ೧) ಒಳ ಹಿಮಾಲಯ ಪರ್ವತಗಳು. ೨) ಮಧ್ಯದ ಉನ್ನತ ಶ್ರೇಣಿಗಳು, ೩) ಹೊರ ಹಿಮಾಲಯ ಶ್ರೇಣಿಗಳು.

೨) ಉತ್ತರ ಭಾರತದ ವಿಶಾಲ ಮೈದಾನ ಪ್ರದೇಶ: (ಪೂರ್ವ ಪಶ್ಚಿಮವಾಗಿ ಸುಮಾರು ೧೫೦೦ ಮೈಲು ಉದ್ದವಾಗಿಯೂ ಉತ್ತರ ದಕ್ಷಿಣವಾಗಿ ಸುಮಾರು ೧೦೦–೨೦೦ ಮೈಲು ಅಗಲವಾಗಿದೆ) ಈ ಮೈದಾನದ ಮೂಲಕ ಸಿಂಧೂ–ಗಂಗಾ ನದಿಗಳೂ ಉಪನದಿಗಳೂ ಹರಿಯುತ್ತವೆ. ಇದು ಫಲವತ್ತಾದ ರೇವೆ ಮಣ್ಣಿನಿಂದ ಕೂಡಿದ ಪ್ರದೇಶವಾಗಿದೆ. ಪುರಾತನ ಸಿಂಧೂ ಸಂಸ್ಕೃತಿ ಬೆಳವಣಿಗೆಗೆ ಇದೇ ಸ್ಥಾನವಾಗಿತ್ತಲ್ಲದೆ, ಸತ್ಲಜ ನದಿಯಿಂದ ಬ್ರಹ್ಮಪುತ್ರಾ ನದಿಯ ವರೆಗೆ ಹಬ್ಬಿದೆ ಎಂದು ಸಾಮಾನ್ಯವಾಗಿ ಹೇಳಬಹುದು.

ಗಂಗಾ ನದಿಯು ವಿಶಾಲ ಮೈದಾನದಲ್ಲಿ ಹರಿಯುವ ಮುಖ್ಯ ನದಿ. ಯಮುನಾ, ಗೋಗ್ರಾ, ಗೋಮತಿ, ಗಂಡಕಿ, ಕೋಸಿ ಹಾಗೂ ಸೋನ ಇವು ಉಪನದಿಗಳಾಗಿರುವವು. ಬ್ರಹ್ಮ

ಪುತ್ರಾ ನದಿಯೂ ಗಂಗಾ ನದಿಯನ್ನು ಸೇರುತ್ತದೆ. ಇದು ಬಹು ವಿಶಾಲವಾದ ಡೆಲ್ಟಾ ಪ್ರದೇಶವನ್ನು ನಿರ್ಮಿಸಿದೆ.

೩) **ದಕ್ಷಿಣದ ಪೀಠಭೂಮಿ:**–ಇದು ಮೈದಾನದ ದಕ್ಷಿಣಕ್ಕಿರುವ ವಿಶಾಲ ಪ್ರದೇಶ. ಇದು ಬೆಟ್ಟ ಗುಡ್ಡಗಳಿಂದ ಕೂಡಿದ ತ್ರಿಕೋಣಾಕಾರದ ಭೂಮಿ. ಇದನ್ನು, ಮಧ್ಯ ಭಾರತದ ಪರ್ವತಗಳು ಮತ್ತು ಪೀಠ ಭೂಮಿ, ಡೆಕ್ಕನ್ ಪೀಠಭೂಮಿ, ಪಶ್ಚಿಮ ಮತ್ತು ಪೂರ್ವ ಘಟ್ಟಗಳು ಮತ್ತು ಪೂರ್ವ ಕರಾವಳಿ ಮೈದಾನಗಳು ಎಂದು ವಿಭಾಗಿಸಬಹುದು.

ಹವಾಮಾನ :– ಸಾಮಾನ್ಯವಾಗಿ ದಕ್ಷಿಣದಲ್ಲಿ ವರ್ಷವೆಲ್ಲಾ ಹೆಚ್ಚು ಉಷ್ಣಾಂಶವಿರುತ್ತದೆ. ಇದು ಉಷ್ಣವಲಯದಲ್ಲಿದ್ದರೂ ಸಾಕಷ್ಟು ಎತ್ತರದ ಪೀಠಭೂಮಿಯಾಗಿರುವದರಿಂದ ಬೇಸಿಗೆಯ ಉಷ್ಣತೆಯು ಹೆಚ್ಚಾಗಿರುವದಿಲ್ಲ. ಆದರೆ ೧೦೦೦ ಅಡಿಗಿಂತ ಕಡಿಮೆ ಎತ್ತರವುಳ್ಳ ಉತ್ತರ ಮೈದಾನದಲ್ಲಿ ಬೇಸಿಗೆಯ ಉಷ್ಣತೆ ಅತಿ ಹೆಚ್ಚಾಗಿರುವದು. ಉನ್ನತವಾದ ಹಿಮಾಲಯ ಪರ್ವತಗಳ ಮೇಲೆ ಉಷ್ಣತೆಯು ತೀವ್ರವಾಗಿ ಕಡಿಮೆಯಾಗುವದು. ಸುಮಾರು ೧೭,೦೦೦ ಅಡಿ ಎತ್ತರದ ಮೇಲೆ ಹಿಮ ಬೀಳುವಷ್ಟು ಶೀತವಾಗಿರುತ್ತದೆ. ಹಿಮಾಲಯದಿಂದಾಗಿ ಚಳಿಗಾಲದಲ್ಲಿ ಬರಬಹುದಾದ ಅತಿ ಶೀತ ಮಾರುತಗಳು ತಡೆಯಲ್ಪಡುತ್ತವೆ. ದೇಶದ ವಿವಿಧ ಪರ್ವತಗಳು ಮಳೆಯ ವಿತರಣೆಯನ್ನು ನಿಯಂತ್ರಿಸಿ, ನಿರ್ಧರಿಸುತ್ತವೆ. ದೇಶದ ಒಳಭಾಗದಲ್ಲಿ ಸಮುದ್ರ ಪ್ರಭಾವ ಕಂಡು ಬರುವದಿಲ್ಲ. ಇದರಿಂದಾಗಿ ಬೇಸಿಗೆಯಲ್ಲಿ ಅಧಿಕ ಉಷ್ಣತೆಯೂ, ಚಳಿಗಾಲದಲ್ಲಿ ಶೀತವಾ

ಗಿಯೂ ವಿಪರೀತ ಪರಿಸ್ಥಿತಿ ಕಂಡು ಬರುತ್ತದೆ. ಮೂರು ಕಡೆಗಳಲ್ಲಿ ಸಮುದ್ರಗಳಿರುವದರಿಂದ ಈಶಾನ್ಯ ಮತ್ತು ನೈರುತ್ಯ ಮನ್ಸೂನ ಮಾರುತಗಳುಂಟಾಗಲು ಅನುಕೂಲತೆಗಳಿವೆ.

ಋತುಗಳನ್ನು ಅವಲಂಬಿಸಿದ ನಾಲ್ಕು ಭಿನ್ನ ಹವಾಮಾನ ಪರಿಸ್ಥಿತಿ ಕಂಡುಬರುತ್ತದೆ.

೧) ಅಧಿಕ ಉಷ್ಣಾಂಶದ ಶುಷ್ಕ ಬೇಸಿಗೆ (ಮಾರ್ಚ್‌ನಿಂದ ಜೂನ್)

೨) ಅಧಿಕ ಉಷ್ಣಾಂಶವುಳ್ಳ ಮುಂಗಾರು ಮಳೆಗಾಲ (ಜೂನದಿಂದ ಅಕ್ಟೋಬರ್)

೩) ಸಾಧಾರಣ ಉಷ್ಣಾಂಶವುಳ್ಳ ಚಳಿಗಾಲ ಮತ್ತು ಹಿಂಗಾರು ಮಳೆಗಾಲ (ನವೆಂಬರ ಡಿಶಂಬರ್)

೪) ತಂಪಾದ ಶುಷ್ಕ ಚಳಿಗಾಲ (ಜನೇವರಿಯಿಂದ ಮಾರ್ಚದ ವರೆಗೆ)

ಇದರಲ್ಲಿ ಬಹುಮುಖ್ಯವಾದದ್ದು ಮನ್ಸೂನ ಮಳೆಗಾಲ

ಈ ಕಾಲಾವಧಿಯಲ್ಲಿ ಉತ್ತರ ಮೈದಾನದಲ್ಲಿ ಕಡಿಮೆ ಒತ್ತಡದ ಕೇಂದ್ರವಿರುವದು. ಹಿಂದೂ ಸಾಗರವು ಅಧಿಕ ಒತ್ತಡ ಪ್ರದೇಶವಾಗಿರುವದು. ಆಗ ಆಗ್ನೇಯ ವ್ಯಾಪಾರಿ ಗಾಳಿಗಳು ವಿಷುವವೃತ್ತವನ್ನು ದಾಟಿ, ದಿಕ್ಕಿನ ಬದಲಾವಣೆಗೊಳಗಾಗಿ ಕಡಿಮೆ ಒತ್ತಡ ಪ್ರದೇಶದೆಡೆಗೆ ಬೀಸತೊಡಗುವವು. ಮೊದಲು ಗುಡುಗು ಮಿಂಚು ಸಿಡಿಲುಗಳನ್ನೊಳಗೊಂಡ ಪರಿಸರದಲ್ಲಿ ಮಳೆಯಾಗುವುದು. ನಂತರ ಮನ್ಸೂನ ಮಾರುತಗಳು ರಭಸದಿಂದ ಬೀಸಿ ವ್ಯಾಪಕವಾಗಿ ಮಳೆಯನ್ನು ಕೊಡುವವು.

ಪಶ್ಚಿಮ ತೀರ, ಬಂಗಾಲ, ಆಸ್ಸಾಂ ಈ ಭಾಗಗಳಿಗೆ ೮೦''ಗೆ ಹೆಚ್ಚು; ಪೂರ್ವತೀರ, ಬಿಹಾರ, ಮಧ್ಯ ಭಾರತ, ಸಾತ್ಪುರ ಭಾಗಗಳಿಗೆ ೫೦-೮೦ ವರೆಗೆ: ಉತ್ತರ ಪ್ರದೇಶ ಮತ್ತು ಮೈಸೂರು, ಮಹಾರಾಷ್ಟ್ರಗಳ ಪಶ್ಚಿಮ ಭಾಗ ೩೫-೫೦ ವರೆಗೆ ಮತ್ತು ಗುಜರಾತ, ಹೈದರಾಬಾದ ಮೈಸೂರಿನ ಉತ್ತರ ಭಾಗ ಪಂಜಾಬಗಳಿಗೆ ೨೦-೩೫ ವರೆಗೆ ಮಳೆ ಬೀಳುವದು. ಆಗಾಗ್ಗೆ ನಿಯಮಿತ ಕಾಲವನ್ನು ಮೀರಿ ಅಕಾಲವೃಷ್ಟಿ, ಅನಾವೃಷ್ಟಿ, ಅತಿ ವೃಷ್ಟಿಗಳಿಗೆ ತುತ್ತಾಗುವವು. ಇದರಿಂದ ದೇಶದ ಒಕ್ಕಲುತನದ ಮೇಲೆ ಹಾನಿಕರ ಪರಿಣಾಮಗಳುಂಟಾಗುವವು.

ಮನ್ಸೂನ್ ಮಳೆಯು ದೇಶದ ಆರ್ಥಿಕಾಭಿವೃದ್ಧಿ ಆಹಾರೋತ್ಪಾದನೆಯನ್ನು ನಿರ್ಧರಿಸುವ ಬಹು ಮುಖ್ಯ ಅಂಶವಾಗಿದೆ :

ಸಸ್ಯವರ್ಗ:- ದಟ್ಟವಾದ ನಿತ್ಯಹರಿದ್ವರ್ಣದ ಕಾಡುಗಳು ೮೦'' ಮೇಲ್ಪಟ್ಟು ಮಳೆಯಾಗುವಲ್ಲಿ (ತೇಗು, ರೋಜವುಡ್, ಸಾಲ, ಎಜೊಪಿ, ಬಿದಿರು) ಮನ್ಸೂನ ಕಾಡುಗಳು (೪೦''-೫೦'') ಮಳೆ (ಗಂಧ, ಬಿದಿರು, ತೇಗು, ಸಾಲ ಹೊನ್ನಿ ಇತ್ಯಾದಿ) ಅತಿ ವಿರಳ ಕಾಡುಗಳು (೨೫-೪೦) ಉರುವಲು ಕಟ್ಟಿಗೆ.

ಹಿಮಾಲಯ ತಪ್ಪಲುಗಳಲ್ಲಿ ಕೊನಿಫೆರರ್ ಮತ್ತು ವಿಸ್ತೃತ ಹುಲ್ಲುಗಾವಲುಗಳು ಕಂಡುಬರುವವು. ಒಕ್ಕಲುತನಕ್ಕಾಗಿ ಅಡವಿಗಳನ್ನು ವಿಸ್ತೃತವಾಗಿ ಬಯಲು ಮಾಡಲಾಗಿದೆ. ಈಗ ಶೇಕಡಾ ೨೦ ಮಾತ್ರ ಕಾಡುಗಳು ಇವೆ.

ಮಾನವ ಜೀವನ - ಆರ್ಥಿಕಾಭಿವೃದ್ಧಿ :-ಮೇಲ್ಕಾಣಿಸಿದ ಭೂ ಸ್ವರೂಪ, ಸ್ಥಾನ, ಹವಾಮಾನ ಮುಖ್ಯವಾಗಿ ಮಳೆಯ ವೈಶಿಷ್ಟ್ಯಗಳಿಂದಾಗಿ ಭಾರತ ದೇಶವು ಒಕ್ಕಲುತನದ ದೇಶವಾಗಿದೆ. (ಶೇಕಡಾ ೭೦-೭೫ ಜನರು ಇದನ್ನು ಅವಲಂಬಿಸಿರುವರು.) ಒಕ್ಕಲುತನವೇ ಬಹುಮುಖ್ಯ ಜೀವನವೃತ್ತಿಯಲ್ಲದೇ ದೇಶದ ವಾಣಿಜ್ಯ ವ್ಯವಸ್ಥೆಗೆ ಪ್ರಧಾನ ಆಧಾರವಾಗಿದೆ. ಒಕ್ಕಲುತನ ಮುಖ್ಯ ಉತ್ಪನ್ನಗಳೆಂದರೆ ಅಕ್ಕಿ, ಗೋಧಿ, ಜೋಳ, ದ್ವಿದಳ ಧಾನ್ಯ ಮುಂತಾದ ಆಹಾರ ಧಾನ್ಯಗಳು ಮತ್ತು ಹತ್ತಿ, ಕಬ್ಬು, ಸೆಣಬು, ಟೀ, ಕಾಫೀ, ಶೇಂಗಾ, ತೆಂಗು ಮುಂತಾದ ವಾಣಿಜ್ಯ ಬೆಳೆಗಳಿವೆ. ಹೀಗೆ ಇಡೀ ಭಾರತದ ಆರ್ಥಿಕಾಭಿವೃದ್ಧಿಗೆ ಒಕ್ಕಲುತನವೇ ಬೆನ್ನೆಲುಬಾಗಿದೆ. ಆದ್ದರಿಂದ ಪರಿಸರದ ಮೇಲೆಯೇ ಒಕ್ಕಲುತನ ಆಧಾರವಾಗಿದೆ. ವಾರ್ಷಿಕ ಮಳೆ ಎಲ್ಲವನ್ನೂ ನಿರ್ಧರಿಸುವ ಪ್ರಮುಖ ಅಂಶ. ಇದಲ್ಲದೆ ಮಳೆಯು ಕೇವಲ ೪-೫ ತಿಂಗಳು ಮಾತ್ರ ಬೀಳುವದು. ವರ್ಷದ ಉಳಿದ ಭಾಗ ಶುಷ್ಕವಿರುತ್ತದೆ. ಹಾಗೂ ೬೦ ಇಂಚಿಗಿಂತ ಮಳೆ ಹೆಚ್ಚಾಗುವ ಪ್ರದೇಶ ಕಡಿಮೆಯಾಗಿದೆ. ಎರಡು ಫಸಲು ಬರುವ ಪ್ರದೇಶವೂ ವಿರಳ. ಭಾರತದಲ್ಲಿ ಒಕ್ಕಲುತನದ ಪದ್ಧತಿಯೂ ಪುರಾತನ ಕ್ರಮಗಳಲ್ಲಿ ನಡೆಯುತ್ತಿದೆ. ಬಡತನದಿಂದಾಗಿ ಬಹಳಷ್ಟು ಭೂಮಿ ಪಡಗೆಡುವದೂ ನಡೆಯುತ್ತದೆ. ಇವೆಲ್ಲ ಕಾರಣಗಳಿಂದ ಎಕರೆವಾರು ಇಳುವರಿ ಜಗತ್ತಿನಲ್ಲಿಯೆ ಅತಿ ಕಡಿಮೆ. ಇಂತಹ ಕೆಲವು ನ್ಯೂನತೆಗಳಿಂದ ಇನ್ನೂ ಉತ್ಪಾದನಾ ಸಾಮರ್ಥ್ಯವು ಅಭಿವೃದ್ಧಿ ಹೊಂದಿಲ್ಲ.

ಒಟ್ಟು ವಿಸ್ತೀರ್ಣದ ಶೇಕಡ ೮೦ ರಷ್ಟು ಪ್ರದೇಶ ಸಾಗುವಳಿಯಲ್ಲಿದ್ದರೂ ಇದರ ಕೇವಲ ೨೫% ನೀರಾವರಿ ಸೌಲಭ್ಯ ಹೊಂದಿದೆ. ಆದ್ದರಿಂದ ನೀರಾವರಿ ವಿಸ್ತರಣೆಯು ಅತ್ಯವಶ್ಯವಾಗಿದೆ. ಬಾವಿ, ಕೆರೆ, ನದಿ ಕಾಲುವೆಗಳ ಸಹಾಯದಿಂದ ನೀರಾವರಿ ಸೌಲಭ್ಯ ಪಡೆಯಲಾಗುತ್ತದೆ. ಕೃಷ್ಣರಾಜಸಾಗರ, ತುಂಗಭದ್ರ ಯೋಜನೆ, ಮೆಟ್ಟೂರು, ಕೆಳಭವಾನಿ, ಚಲಿಕುಟಿ ಮುಲಂಪೂರ, ನಾಗಾರ್ಜುನಸಾಗರ, ರಾಮಪಾದಸಾಗರ, ಮಚ್ಛಕುಂಡ, ಕೆಲಾಯ್ನ, ಕಕ್ರಪಾರಾ, ನರ್ಮದಾ, ರಿಹಾಂದ, ಛಂಬಲ, ಖೆಡ್ವಾ, ಭಾಕ್ರಾನಾಂಗಲ, ಹಿರಾಕುಡ್, ದಾಮೋದರ, ಕೋಸಿ, ಮತ್ತು ಶಾರದಾ, ಗೋಗ್ರಾ ಇವು ಮುಖ್ಯವಾದ ನೀರಾವರಿ ಮತ್ತು ವಿವಿಧೋದ್ದೇಶ ಯೋಜನೆಗಳಾಗಿವೆ.

ಇತರ ಬೆಳೆಗಳು : ರಬ್ಬರ್, ತೆಂಗು, ಹೊಗೆಸೊಪ್ಪು, ಹಣ್ಣುಗಳು ಮುಖ್ಯವಾಗಿವೆ. ಪಶುಪಾಲನೆ ಮತ್ತು ಮೀನುಗಾರಿಕೆಯು ಮತ್ತೊಂದು ಮಹತ್ವದ ಉದ್ಯೋಗ. (೨೮೦ ದಶಲಕ್ಷ ದನಕರುಗಳು).ಇದು ಒಕ್ಕಲುತನಕ್ಕೆ ಸಹಾಯಕವಾಗಿಯೂ, ಅದನ್ನು ಅವಲಂಬಿಸಿಯೂ ಕಂಡು ಬರುವ ವೃತ್ತಿ. ಹಾಲಿನ ಪದಾರ್ಥ, ಗೊಬ್ಬರ, ಚರ್ಮಗಳು ಮುಖ್ಯ ಉತ್ಪಾದನೆಗಳು. ಕುರಿ, ಹಂದಿ, ಕೋಳಿ ಸಾಕುವದು ವ್ಯಾಪಕವಾಗಿ ಕಂಡುಬಂದು ಇದು ಸಹಾಯಕ ವೃತ್ತಿ ಎಂದೆನ್ನಿಸುವದು.

ಮೀನು ಹಿಡಿಯುವದು ಕರಾವಳಿಗಳಲ್ಲಿಯೂ, ದೊಡ್ಡ ನದಿಗಳಲ್ಲಿಯೂ ನಡೆಯುತ್ತದೆ, ಇತ್ತೀಚೆಗೆ ದೋಣಿಗಳು, ಶೈತ್ಯಾಗಾರ ನಿರ್ಮಾಣ,ಶೈತ್ಯೀಕರಣ ವ್ಯವಸ್ಥೆ,ತೀವ್ರ ಸಾಗಾಣಿಕೆ

ಒಕ್ಕಲುತನದ ಉತ್ಪನ್ನಗಳ ಭೌಗೋಲಿಕ ಅಂಶಗಳು

ಬೆಳೆ	ಉಷ್ಣಾಂಶ	ನೀರು	ಮಣ್ಣು	ಇತರ ಆವಶ್ಯಕತೆಗಳು
ಭತ್ತ	೭೦-೦೦	೬೦ ನೀರಾವರಿ	ಶಿಲೆ, ಜೇಡು, ಹೂಮುಸೆ	ಹೆಚ್ಚು ಗೊಬ್ಬರ. ಹೆಚ್ಚು ಕೂಲಿಕಾರರು.
ಗೋಧಿ	೬೦-೭೫	೨೦-೪೫ ನೀರಾವರಿ	ಸುಣ್ಣವುಳ್ಳ ಶಿಲೆ	ಸಾಧಾರಣ ಗೊಬ್ಬರ
ಉರುಟು ಧಾನ್ಯಗಳು	೬೦-೯೦	೧೫-೪೫	ಸಾಧಾರಣ ಕೆಂಪುಗೋದಿ	ಕಡಿಮೆ
ಹತ್ತಿ	೬೦-೮೦	೧೪-೪೫ ನೀರಾವರಿ	ಕಪ್ಪು ಜೇಡಿ	ಹೆಚ್ಚು ಕೂಲಿಕಾರರು
ಕಬ್ಬು	೭೦-೮೫	೪೦-೮೦ ನೀರಾವರಿ	ಸುಣ್ಣಶಿಲೆ ಫಾಸ್ಫೇಟ್	ಹೆಚ್ಚು
ಎಣ್ಣೆ ಕಾಳುಗಳು	೬೫-೮೦	೨೦-೫೦	ಉತ್ತಮ	ಸಾಧಾರಣ ಗೊಬ್ಬರ
ಕಾಫಿ	೭೦-೮೫	೬೦-೧೦೦ ನೆರಳು	ಕೆಂಪು ಇಳಿಜಾರು	ಹೆಚ್ಚು ಗೊಬ್ಬರ. ಕೂಲಿಕಾರರು
ಟೀ	೬೦-೮೦	೬೦-೧೫೦ ಮಂಜು	,,	,,

ಆಗಿದೆ. ಮೀನು ತಿನ್ನುವದು ರೂಢಿಯಲ್ಲಿಲ್ಲದ ಸಮಾಜಗಳಲ್ಲಿ ಕೂಡ (ಬ್ರಾಹ್ಮಣರು) ಮೀನುಗಳು ದೊಡ್ಡ ಪ್ರಮಾಣದಲ್ಲಿ ಸಿಗುತ್ತಿದ್ದರೆ (ಆಸ್ಸಾಂ, ಬಂಗಾಲ ಓರಿಸ್ಸಾ) ಅದೇ ಮುಖ್ಯ ಆಹಾರವಾಗಿದೆ. ಇಲ್ಲಿ ಪರಿಪಸರಕ್ಕೆ ಜನರ ಹೊಂದಾಣಿಕೆಯ ಒಂದು ಉದಾಹರಣೆ ಕಾಣಬಹುದು.

ಭಾರತವು ತನ್ನದೇ ಆದ ಪುರಾತನ ಸಂಸ್ಕೃತಿಯನ್ನು ಹೊಂದಿರುವದರಿಂದ ಪರಿಸರದ ಪ್ರಭಾವಗಳನ್ನು ನೇರವಾಗಿ ಹೇಳುವದು ಬಹುಕಷ್ಟ. ಇಲ್ಲಿ, ಸಾಕಷ್ಟು ಮುಂದುವರಿದ ಸಮಾಜವಿದೆ. ಆದ್ದರಿಂದ ಆರ್ಥಿಕ ಚಟುವಟಿಕೆಗಳ ಮುಂದಿನ ಹಂತಗಳನ್ನು ಇಲ್ಲಿ ಮಾನವ ಅವಲಂಬಿಸಿದ್ದಾನೆ, ಅಭಿವೃದ್ಧಿ ಪಡಿಸಿದ್ದಾನೆ. ಉದಾ : ಖನಿಜ ಸಂಪತ್ತನ್ನು ಕಂಡುಹಿಡಿದು ಅವುಗಳ ಉಪಯೋಗವಲ್ಲದೆ ಬೃಹತ್ ಉದ್ದಿಮೆಗಳನ್ನು ಸಣ್ಣ ಉದ್ದಿಮೆಗಳನ್ನು ಸ್ಥಾಪಿಸಿ ಮುಂದಿನ ಹಂತವನ್ನು ತಲುಪಿದ್ದಾನೆ.

ಖನಿಜಗಳ ಅಭಿವೃದ್ಧಿ : ಕಬ್ಬಿಣ, ಮ್ಯಾಂಗನೀಸ್, ಕ್ರೊಮೈಟ್, ಅಭ್ರಕಗಳನ್ನು ದೊಡ್ಡಪ್ರಮಾಣದಲ್ಲಿಯೂ, ತಾಮ್ರ, ಸೀಸ, ತವರು, ಥೋರಿಯಂ ಬಾಕ್ಸೈಟು, ಚಿನ್ನ, ಜಿಪ್ಸಂ ಟಂಗಸ್ಟನ್, ಗ್ರಾಫೈಟ, ಫಾಸ್ಫೇಟ್ ಮುಂತಾದವುಗಳು ಅಲ್ಪ ಪ್ರಮಾಣದಲ್ಲಿ ದೊರಕುವವು. ಪೆಟ್ರೋಲಿಯಂ ಸಿಕ್ಕುವ ಭಾಗಗಳಿಂದ ಪಡೆದು ಶುದ್ಧೀಕರಿಸುವರು. ಇವು ದೇಶದ ಸಂಪೂರ್ಣ ಬೇಡಿಕೆಯನ್ನು ಪೂರೈಸುವದಿಲ್ಲ. ಆದ್ದರಿಂದ ೧೦ ದಶಲಕ್ಷ ಟನ್ನು ತರಿಸಿಕೊಳ್ಳುವರು.

ಇತ್ತೀಚೆಗೆ ಜಲವಿದ್ಯುಚ್ಛಕ್ತಿಯು ಉತ್ಪಾದನೆ ಗಣನೀಯವಾಗಿ ಹೆಚ್ಚಿದೆ. ಇದು ಔದ್ಯೋಗೀಕರಣದಲ್ಲಿ ಬಹು ದೊಡ್ಡ ಪಾತ್ರವಹಿಸುತ್ತದೆ.

ಭಾರತದಲ್ಲಿ ಭಾರಿ ಕೈಗಾರಿಕೆಗಳಲ್ಲಿ, ಕಬ್ಬಿಣ ಮತ್ತು ಉಕ್ಕು, ಹತ್ತಿಬಟ್ಟೆ, ಸಕ್ಕರೆ, ಎಣ್ಣೆ ಮತ್ತು ಉಪವಸ್ತುಗಳು, ರಾಸಾಯನಿಕ ವಸ್ತುಗಳು ಮತ್ತು ಗೊಬ್ಬರ, ಸಿಮೆಂಟ, ಅಲ್ಯುಮಿನಿಯಂ, ಸಣಬು, ಕಾಗದ ಮುಂತಾದ ಕಾರ್ಖಾನೆಗಳು ದೇಶದ ಆರ್ಥಿಕ ಪ್ರಗತಿಯ ಪ್ರತೀಕವಾಗಿವೆ.

ಭಾರತದಲ್ಲಿ ಎಲ್ಲ ಬಗೆಯ ಆಧುನಿಕ ಮಾರ್ಗ ಸೌಕರ್ಯಗಳು ಕಂಡುಬರುತ್ತವೆ. ರಸ್ತೆಸಾರಿಗೆ, ರೈಲು ಮಾರ್ಗ, ಜಲ ಮಾರ್ಗ, ವಿಮಾನ ಮಾರ್ಗ, ಬಂದರುಗಳು ವಾಣಿಜ್ಯಕ್ಕೆ ಸಹಾಯಕವಾಗಿ ಕಾರ್ಯ ಮಾಡುತ್ತವೆ.

ಭಾರತದಿಂದ ಟೀ, ಹತ್ತಿಬಟ್ಟೆಗಳು, ಚರ್ಮ, ಕಬ್ಬಿಣ, ತಂಬಾಕು, ಕಾಫಿ, ವನಸ್ಪತಿ, ಮತ್ತು ಇತರ ಎಣ್ಣೆಗಳು, ಸಕ್ಕರೆ, ಅಭ್ರಕ, ಸಣಬಿನ ವಸ್ತುಗಳು ರಫಾಗುತ್ತಿವೆ. ಪೆಟ್ರೋಲಿಯಂ, ಉತ್ತಮ ಬಟ್ಟೆಗಳು, ರಾಸಾಯನಿಕವಸ್ತುಗಳು, ವಾಹನಗಳು, ಗೋಧಿ, ಮಿಲಿಟರಿ ಸಾಮಾನುಗಳು, ಕಾಗದ, ಹಲವು ಲೋಹಗಳು. ಆಮದಾಗುತ್ತವೆ.

ಜನಸಾಂದ್ರತೆ:— (ಸರಾಸರಿ ೨೪೦ ಪ್ರತಿ ಚ. ಮೈ.) ಜನಸಾಂದ್ರತೆಯು ಫಲವತ್ತಾದ ಭಾಗಗಳಲ್ಲಿಯೂ, ಕೈಗಾರಿಕಾ ಪ್ರದೇಶಗಳಲ್ಲಿಯೂ, ನಗರಗಳಲ್ಲೂ ಹೆಚ್ಚಿಗಿದ್ದು, ಪ್ರಾದೇಶಿಕ

ಉತ್ಪಾದನಾ ಸಾಮರ್ಥ್ಯ ಹಾಗೂ ಉದ್ಯೋಗಾವಕಾಶವನ್ನವ ಲಂಬಿಸಿ ವ್ಯತ್ಯಾಸವಾಗುವದು.

ಈಗ ಮಾನ್ಸೂನ ಪ್ರದೇಶದಲ್ಲಿಯ ಭಾರತಾಂತರ್ಗತ ಮೈಸೂರು ರಾಜ್ಯದ ಭೌಗೋಲಿಕ ಪರಿಸರ ಮತ್ತು ಮಾನವ ಜೀವನದ ಬಗ್ಗೆ ತಿಳಿದರೆ,ನಮ್ಮ ಸುತ್ತುಮುತ್ತಲಿನ ಪರಿಸರದಿಂದ ಪ್ರಾರಂಭಿಸಿ, ಪ್ರಪಂಚದಲ್ಲಿ ಕಂಡುಬರುವ ವಿವಿಧ ವಿಶಿಷ್ಟ ಪರಿಸರಗಳು ಮತ್ತು ಅಲ್ಲಿಯ ಮಾನವಜೀವನದ ಚಿತ್ರಣ ಪೂರ್ತಿಯಾಗುವದು.

ಕರ್ನಾಟಕ (ಮೈಸೂರು ರಾಜ್ಯ)

ಮಾನ್ಸೂನ್ ಅಥವಾ ಭಾರತದಲ್ಲಿಯ ಪರಿಸರದ ವೈಶಿಷ್ಟ್ಯಗಳು ಇಲ್ಲಿಯೂ ಕೂಡ ಕಂಡುಬರುತ್ತವೆ. ಆದುದರಿಂದ ಕೇವಲ ಮುಖ್ಯ ವ್ಯತ್ಯಾಸಗಳನ್ನಷ್ಟೇ ತಿಳಿದು ಈ ಲೇಖ ಮುಗಿಯುತ್ತದೆ.

ಜನಜೀವನವು ಆಯಾ ಪ್ರದೇಶಗಳ ಇತಿಹಾಸ ಮತ್ತು ಭೌಗೋಲಿಕ ಅಂಶಗಳಿಂದ ಪ್ರಭಾವಿತವಾಗಿರುವದೆಂಬ ವಿಚಾರದಲ್ಲಿ ಎರಡು ಅಭಿಪ್ರಾಯಗಳಿಲ್ಲ.

ಕರ್ನಾಟಕಸ್ಥರು ತಮ್ಮ ಭವ್ಯ ಇತಿಹಾಸವನ್ನು ಹೆಮ್ಮೆ ಮತ್ತು ಆನಂದಗಳಿಂದ ಸ್ಮರಿಸಬಹುದು. ಕನ್ನಡ ಇಲ್ಲಿಯ ಪ್ರಾದೇಶಿಕ ಭಾಷೆ. ಭಾಷೆಯ ಪ್ರಭಾವದಿಂದ ಒಂದಾದ ಜನ ವಿಶಿಷ್ಟವಾದ ಸಂಸ್ಕೃತಿಯೊಂದನ್ನು ಬೆಳೆಸಿಕೊಂಡಿರುವರು. ಕಲೆ, ಶಿಲ್ಪಕಲೆ, ಸಾಹಿತ್ಯ, ಧರ್ಮ ಮತ್ತು ತತ್ವಜ್ಞಾನ, ದೇಶಪ್ರೇಮ

ಮತ್ತು ರಾಜ್ಯಗಳನ್ನು ಕಟ್ಟುವದು; ಒಕ್ಕಲುತನ ಮತ್ತು ಉದ್ಯೋಗ ವ್ಯಾಪಾರ ಮುಂತಾದ ಚಟುವಟಿಕೆಗಳಲ್ಲಿ ಪ್ರಬುದ್ಧತೆಯನ್ನು ತೋರಿಸಿದ್ದಾರೆ. ಇವೆಲ್ಲ ಸಾಧನಗಳು ಭಾರತೀಯ ಸಂಸ್ಕೃತಿಯ ಒಂದು ಅಂಗವಾಗಿ ಬಂದಿವೆಯೆಂದು ಹೇಳಬಹುದು.

ಕರ್ನಾಟಕದಲ್ಲಿಯ ಅಂತರ್‌ಸೀಮಾ ವೈವಿಧ್ಯಗಳು:

ಕರಾವಳೀ ಸೀಮೆಯು ಒಂದು ಸಂಚಯನ ಮೈದಾನು. ಮಲೆನಾಡು ಸೀಮೆ ದಟ್ಟಡವಿ, ದರಿಕಂದರಗಳಿಂದ ಕೂಡಿದ ಪರ್ವತ ಪ್ರದೇಶವಾಗಿದೆ; ಮೈದಾನು ಪ್ರದೇಶದಲ್ಲಿ ಇವೆರಡರ ನಡುವಿನ ಭೂಸ್ವರೂಪ– ಸಾಮಾನ್ಯವಾಗಿ ಸಮತಟ್ಟಾಗಿಯೂ ಅಲ್ಲಲ್ಲಿ ಕೊಳ್ಳ ಗುಡ್ಡಗಳನ್ನು ಹೊಂದಿದೆ. ಅದರಲ್ಲಿಯೂ ದಕ್ಷಿಣ ಮೈದಾನವು ಹೆಚ್ಚು ಎತ್ತರವಾಗಿಯೂ ಬಹಳಷ್ಟು ಗುಡ್ಡಗಾಡು ಪ್ರದೇಶಗಳನ್ನು ಹೊಂದಿದೆ.

ಕರಾವಳಿ ಸೀಮೆಯಲ್ಲಿ ಮುಖ್ಯ ಮೀನುಗಾರಿಕೆ, ನಂತರ ಒಕ್ಕಲುತನ ಉದ್ಯೋಗಗಳಾಗಿವೆ. ಮಲೆನಾಡಿನಲ್ಲಿ ಕೊಳ್ಳಗಳಲ್ಲಿಯ ಒಕ್ಕಲುತನ, ತೋಟಗಾರಿಕೆ, ಕಟ್ಟಿಗೆ ಕಡಿಯುವದು ಮತ್ತು ಅಡವಿಯ ಉತ್ಪನ್ನಗಳನ್ನು ಕೂಡಿ ಹಾಕುವದು ಇವು ಮುಖ್ಯ ಉದ್ಯೋಗ.

ಕರಾವಳಿ ಪ್ರದೇಶವು ಮತ್ತು ನೀರಾವರಿ ಹೊಂದಿ ಉದ್ದಿಮೆಗಳು ಬೆಳೆದ ಮೈದಾನುಗಳಲ್ಲಿ ಜನಸಾಂದ್ರತೆ ಹೆಚ್ಚಿಗಿದೆ. ಮಲೆನಾಡು ಮತ್ತು ಉತ್ತರದ ಋಕ್ಷ ಪ್ರದೇಶಗಳಲ್ಲಿ ಜನಸಂಖ್ಯೆ ಹೆಚ್ಚಾಗಿಲ್ಲ. ಕರಾವಳಿ ಮತ್ತು ಮಲೆನಾಡಿನಲ್ಲಿ ಮಳೆ ಹೆಚ್ಚು.

ಮೈದಾನದ ಪಶ್ಚಿಮ ದಕ್ಷಿಣ ಮತ್ತು ಈಶಾನ್ಯ ಭಾಗಗಳಲ್ಲಿ ಹವಣ ಮಳೆ ಬಿದ್ದರೆ ಮೈದಾನದ ಉಳಿದ ಭಾಗಗಳಲ್ಲಿ ಮಳೆಯ ಅಭಾವ ಕಂಡುಬರುವದು.

ದಕ್ಷಿಣದಲ್ಲಿ ಅಕ್ಕಿ, ರಾಗಿ ಆಹಾರ ಜಾಸ್ತಿ. ಉತ್ತರದಲ್ಲಿ ಜನರು ಜೋಳ ಸಜ್ಜೆ ಆಹಾರ ಪದಾರ್ಥವಾಗಿ ಉಪಯೋಗಿಸುವರು. ಕರಾವಳಿಯಲ್ಲಿ ವಾಸಿಸುವ ಬ್ರಾಹ್ಮಣರಿಗೂ ಕೂಡ ಆಹಾರದಲ್ಲಿ ಮೀನು ಮುಖ್ಯ. ಇಲ್ಲಿಯೂ ಪರಿಸರಕ್ಕೆ ಮಾನವನ ಅನಿವಾರ್ಯ ಹೊಂದಿಕೆಯನ್ನು ಕಾಣಬಹುದಾಗಿದೆ. ಅಕ್ಕಿ ಮತ್ತು ಗೋಧಿ ಸ್ವಲ್ಪ ಪ್ರಮಾಣದಲ್ಲಿ ಉಪಯೋಗಿಸುವರು. ಕರ್ನಾಟಕದ ದಕ್ಷಿಣಭಾಗ ಹೆಚ್ಚು ಸಂಪದ್ಭರಿತವಾಗಿದೆ.

ಮನೆಗಳ ಮಾಳಿಗೆಯ ಸ್ವರೂಪದಲ್ಲಿ ಕೂಡ ಮಳೆಯ ವಿತರಣೆಯ ಪ್ರಭಾವವನ್ನು ಕಾಣಬಹುದಾಗಿದೆ. ಕರಾವಳಿಗಳಲ್ಲಿ ಮಾಳಿಗೆಗಳು ಇಳಿಜಾರಿಗಿದ್ದರೆ ಒಣ ಮೈದಾನದಲ್ಲಿ ಅವು ಸಪಾಟಾಗಿರುವವು.

೩೪. ಕನ್ನಡಕ್ಕೆ ಪುರಂದರದಾಸರು ನೀಡಿದ ಕೊಡುಗೆ (ದ್ವಿ. ಆ.)
—ಜಿ. ಡಿ. ನಾಡಕರ್ಣಿ

೩೫. ಪ್ಯಾಶನ್ನುಗಳು (ದ್ವಿ. ಆ.) —ಕೆ. ಡಿ. ತಂಗೋಡ

೩೬. ಮಹಾಕವಿ ರಾಘವಾಂಕನ ಪಾತ್ರಗಳಲ್ಲಿ
ತತ್ವನಿಷ್ಠೆ (ದ್ವಿ. ಆ.)- ಬಿ. ವ್ಹಿ. ಮಲ್ಲಾಪುರ

೩೭ ಅಭಿವೃದ್ಧಿ ಯೋಜನೆಗಳಲ್ಲಿ ಸಹಕಾರದ ಪಾತ್ರ (ದ್ವಿ. ಆ.)
—ಎಸ್. ಜಿ. ಕರಭಂಟನಾಳ

೩೮. ಕನ್ನಡ ಜೈನ ಪುರಾಣಗಳು (ದ್ವಿ.ಆ.)—ಎಸ್. ಎನ್. ನಾಯಕ

೩೯. ಕನ್ನಡ ನಾಟ್ಯಸೃಷ್ಟಿ (ದ್ವಿ.ಆ.) —ಎಚ್. ಜಿ. ಲೋಕೂರ

೪೦. ಹರಿಹರನು ಚಿತ್ರಿಸಿದ ಶಿವಶರಣೆಯರು (ದ್ವಿ.ಆ.)—ಬಿ.ಬಿ.ಹೆಂಡಿ

೪೧. ನೀವು ಬಯಸುವ ಮಗು ಗಂಡೊ?
ಹೆಣ್ಣೊ? (ದ್ವಿ. ಆ.)-ಕೆ. ಆರ್. ರಾಮಸ್ವಾಮಿ

೪೨. ಅಂಡಯ್ಯ —ಬಿ. ಎಸ್. ಕುಲಕರ್ಣಿ

೪೩. ಬೆಳವಲನಾಡಿನ ಬೆಳೆಗಳು —ಎಸ್. ಎ. ಹೊಸಮನಿ

೪೪. ಜಾನಪದ ಕಥೆಗಳು (ದ್ವಿ.ಆ.) —ಎಲ್. ಆರ್. ಹೆಗಡೆ

೪೫. ಸುಧಾರಿಸಿದ ಬೇಸಾಯ (ದ್ವಿ.ಆ.) —ಎ. ಸಿ. ಕಲ್ಯಾಣಿಮಠ

೪೬. ಕನ್ನಡನಾಡಿನ ಐತಿಹಾಸಿಕ ಮಹಾಪುರುಷರು (ದ್ವಿ. ಆ.)
—ಬಿ. ಆರ್. ಗೋಪಾಲ

೪೭. ಗ್ರಂಥಾಲಯದ ಅಂತರಂಗ ದ್ವಿ.ಆ. —ಎಸ್. ಆರ್. ಗುಂಜಾಳ

೪೮. ಸ್ತ್ರೀ ಮತ್ತು ಶಿಕ್ಷಣ (ದ್ವಿ.ಆ.) —ವನಮಾಲಾ ಆಚಾರ್

೪೯. ಜಾಗತಿಕ ಸರಕಾರ —ಸಿ. ವೀರಬಸಣ್ಣ

೫೦. ಸಮುದಾಯ ಸಂಘಟನೆ —ಎಚ್. ಎಂ. ಮರುಳಸಿದ್ಧಯ್ಯ

೫೧. ಅಶೋಕನ ಧರ್ಮಶಾಸನಗಳು —ಶ್ರೀನಿವಾಸ ರಿತ್ತಿ

೫೨. ಪ್ರಾಚೀನ ಭಾರತದ ರಾಜ್ಯಪದ್ಧತಿ (ದ್ವಿ. ಆ.)
—ಸಿ. ವ್ಹಿ. ರಂಗಸ್ವಾಮಿ

೫೩. ಅಕ್ಕಮಹಾದೇವಿ ಮತ್ತು ಮೀರಾಬಾಯಿ
—ಎಸ್. ಎಸ್. ಕಬ್ಬಿನ

೫೪. ಕನ್ನಡ ಕಾವ್ಯದಲ್ಲಿ ವೀರರಸ ನಿರೂಪಣೆ
—ಬಿ. ಬಿ. ಮಹೀಶವಾಡಿ

೫೫. ಹರಿಹರ ಮಹಾಕವಿಯ ಕೆಲವು ಮಹೋನ್ನತ ವಿಚಾರಗಳು
—ಬಿ. ಸಿ. ಜವಳಿ

೫೬. ಭಾರತ ರಾಜ್ಯಘಟನೆ (ದ್ವಿ. ಆ.) —ಎಂ. ಎಸ್. ಪಾಟೀಲ

೫೭. ಪಂಚಾಯತಿ ರಾಜ್ಯ —ಎಸ್. ಜಿ. ಕರಭಂಟನಾಳ
ಮತ್ತು ಕೆ. ಡಿ. ಬಸವ

೫೮. ವಿಷಮಜ್ವರ (ದ್ವಿ. ಆ.) —ಪಿ. ಎಸ್. ಶಂಕರ

೫೯. ಪುಸ್ತಕ ಭಾಂಡಾರ ಕಾಯದೆ —ಜಿ. ಎಂ. ಪಾಟೀಲ

೬೦. ಸರ್ ಐಸಾಕ್ ನ್ಯೂಟನ್ —ಆರ್. ವ್ಹಿ. ಅಬ್ಬಿಗೇರಿ

೬೧. ಗ್ರಾಮಾಭ್ಯುದಯದ ಯೋಜನಾಂಗಗಳು —ಟಿ. ಕೆ. ಮೇಟಿ

೬೨. ಹರಿಜನರ ಸಮಸ್ಯೆಗಳು ಹಾಗು ಅವುಗಳ ಪರಿಹಾರ
—ಎನ್. ಕೆ. ಕಡೆತೋಟದ

೬೩. ರಾಸಾಯನಿಕ ಕಿಣ್ವಗಳು —ಎಂ. ಎಸ್. ಎಸ್. ರಾವ್

೬೪. ಪ್ರಜಾಪ್ರಭುತ್ವದ ಮೂಲತತ್ವಗಳು —ಕೆ. ಬಿ. ಬಕ್ಕಪ್ಪ

೬೫. ಹೃದಯಾಘಾತ — ಪಿ. ಎಸ್. ಶಂಕರ

೬೬. ಆಭರಣಗಳ ಬಗೆಗೆ ಸಾಮಾಜಿಕ ದೃಷ್ಟಿಕೋನ —ಡಿ. ಎ. ಚಿಕ್ಕಿ

೬೭. ಶ್ರೀ ರಾಮಾಯಣ ದರ್ಶನದಲ್ಲಿ ಕುವೆಂಪು ಸೃಜಿಸಿದ ಮೂರು ಪಾತ್ರಗಳು —ಎಂ. ಜಿ. ಬಿರಾದಾರ

೬೮. ಯೋಜನೆಗಳೇಕೆ ಬೇಕು? —ಎಸ್. ಎಸ್. ಯಮ್ಮಿ

೬೯. ಸಗರನಾಡಿನ ಶಿವಶರಣರು —ವ್ಹಿ. ಶಿವಾನಂದ

೭೦. ವಿಜ್ಞಾನದ ದೃಷ್ಟಿಯಲ್ಲಿ ಸೃಷ್ಟಿ —ಆರ್. ಎಸ್. ಭೂಸನೂರಮಠ

೭೧. ವಿಜಯನಗರದ ನಿರ್ಣಾಯಕ ಯುದ್ಧ —ಎಸ್. ಬಿ. ಕೋಡದ

೭೨. ಬಸವಣ್ಣನವರನ್ನು ಕುರಿತ ಶಾಸನಗಳು —ಎಂ. ಎಂ. ಕಲಬುರ್ಗಿ

೭೩. ಆಧುನಿಕ ಭಾಷಾ ವಿಜ್ಞಾನ —ಜಿ. ಎಸ್. ಕುಳ್ಳಿ

೭೪. ಪುರಾಣ ಜಿಜ್ಞಾಸೆ — ಎಲ್. ಆರ್. ಹೆಗಡೆ

೭೫. ಭಾರತದಲ್ಲಿ ಶೈಕ್ಷಣಿಕ ಪ್ರಯೋಗ —ವ್ಹಿ. ಎಸ್. ಕುಲಕರ್ಣಿ

೭೬. ಅಧಿಕ ಉತ್ಪಾದನೆಗಾಗಿ ಮಿಶ್ರತಳಿ ಬೆಳೆಗಳು —ಎ. ಸಿ. ಕಲ್ಯಾಣಿಮಠ

೭೭. ಕನ್ನಡ ನುಡಿಯ ಬೆಳವಣಿಗೆ —ಏಚ್. ಜಿ. ಲೋಕೂರ

೭೮. ಹರಿಹರನ ಗಿರಿಜಾಕಲ್ಯಾಣ —ಬಿ. ವ್ಹಿ. ಶಿರೂರ

೭೯. ಹೊಟ್ಟೆಯ ಹುಣ್ಣು —ಪಿ. ಎಸ್. ಶಂಕರ

೮೦. ಸಂಯೋಜಕ ಶಕ್ತಿ —ಬಿ. ಜಿ. ಜ್ಯೋತಿ

೮೧. ಸಂಸದೀಯ ಸರಕಾರ ಭಾರತಕ್ಕೆ ಒಪ್ಪುವದೇ? —ವಸಂತ ಪಾಟೀಲ

೮೨. ನಮ್ಮ ರೈತರೇಕೆ ಹಿಂದುಳಿದಿದ್ದಾರೆ? —ಎಂ.ಸಿ. ಕೊಡ್ಲಿ

೮೩. ನಗೆಗಾರ ನಯಸೇನ —ಎಂ. ಎಸ್. ಸುಂಕಾಪುರ

೮೪. ಶೂನ್ಯ ಸಂಪಾದನೆ —ವ್ಹಿ. ಎಸ್. ಕಂಬಿ

೮೫. ಮಹಮೂದ ಗವಾನ —ಎಲ್. ಆರ್. ಕುಲಕರ್ಣಿ

೮೬. ಕೆಳದಿಯ ನಾಯಕರು —ಜಿ. ಎಸ್. ದೀಕ್ಷಿತ

೮೭. ಮುಳುಗುಂದ ನಾಡು —ಎಸ್. ಎಚ್. ರಿತ್ತಿ

೮೮. ಶ್ವಾಸಕೋಶಕ್ಷಯ —ಪಿ. ಎಸ್. ಶಂಕರ

೮೯. ಕರ್ನಾಟಕದಲ್ಲಿ ಗ್ರಂಥಾಲಯಗಳು —ಎಸ್. ಆರ್. ಗುಂಜಾಳ

೯೦. ಮಿರ್ಜಾ ಘಾಲಿಬ್ —ಅಬ್ದುಲ್ ಮಜೀದ್‌ಖಾನ್

೯೧. ಕಬೀರದಾಸ —ಬಸವಯ್ಯಾ ಶಿಗೋಳ

೯೨. ಬ್ಯಾಂಕುಗಳ ರಾಷ್ಟ್ರೀಕರಣ —ಎಸ್. ಜಿ. ಕರಭಂಟನಾಳ

೯೩. ಪ್ರಾಚೀನ ಭಾರತದಲ್ಲಿ ಶ್ರಮಜೀವಿಗಳ ಪಾತ್ರ —ಎಸ್. ಜಿ. ಘಟಪಣದಿ

೯೪. ಹಿಂದುಸ್ತಾನಿ ಸಂಗೀತ ಪದ್ಧತಿಯ ರೂಪ-ರೇಷೆಗಳು —ಪ್ರೊ. ಎ. ಯಮ್. ಪಾಟೀಲ

೯೫. ಶ್ರೀ ಅರವಿಂದರ ಸ್ಮರಣೆ —ಶ್ರೀ ಸ. ಸ. ಮಾಳವಾಡ